ಸಂಪುಟ : 9 ಸಂಚಿಕೆ 292 ಪುಟ : 4+2 ಬೆಲೆ: 3.00 ಗುರುವಾರ ಜನವರಿ 2 2025 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 292 Pages : 4+2 Price : 3.00 Thursday January 2 2025 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ನೀರು ಪೂರೈಕೆಯಲ್ಲಿ ವ್ಯತ್ಯಯ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರಕ್ಕೆ ಸಗಟು ನೀರು ಸರಬರಾಜು ಮಾಡುವ ಹಮ್ಮಿಗಿ ಜ್ಯಾಕ್‌ವೆಲ್‌ದಿಂದ ಡಂಬಳ ಮಧ್ಯಂತರ ಪಂಪಿಂಗ್ ಸ್ಟೇಷನ್ ಗೆ ಬರುವ ಸಿಂಗಟಾಲೂರ ಹಿಂಭಾಗದಲ್ಲಿ ಮುಖ್ಯ ಕೊಳವೆ ಮಾರ್ಗಗಳ ದುರಸ್ತಿ ಕಾರ್ಯ ನಡೆದಿದ್ದು,

ದುರಸ್ತಿ ಕಾರ್ಯ ಪೂರ್ಣಗೊಳ್ಳುವವರೆಗೂ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವುದರಿಂದ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕು ಎಂದು ನಗರಸಭೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಿಪಬ್ಲಿಕ್ ಡೇ ಕಾನ್ಟಿನಜೆಂಟ್ 2025ಕ್ಕೆ ಆಯ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ



ಮುದ್ರಣ ಕಾಶಿ ಗದುಗಿನ ವಿದ್ಯಾರ್ಥಿಯೋರ್ವ ಕರ್ನಾಟಕ ಹಾಗೂ ಗೋವಾ ರಿಪಬ್ಲಿಕ್ ಡೇ ಕಾನ್ಟಿನಜೆಂಟ್ 2025ಕ್ಕೆ ಆಯ್ಕೆಯಾಗಿದ್ದಾರೆ. ಪೊಲೀಸ್ ಪೇದೆ ಪ್ರಕಾಶ ಪಡಸಾಲಿಮನಿಯ ಸುಪುತ್ರ ಶ್ರೀನಿವಾಸ್ ಪ್ರಕಾಶ ಪಡಸಾಲಿಮನಿ ಕರ್ನಾಟಕ ಹಾಗೂ ಗೋವಾ ರಿಪಬ್ಲಿಕ್ ಡೇ ಕಾನ್ಟಿನಜೆಂಟ್ 2025ರ ಎನ್‌ಸಿಸಿ ಜಿಪಿ ಮಂಗಳೂರಿನ 5 ಏಂಖ ಓಂಗಿಂಖ ಗಟಿಣ ಓಅಅ ಸೀನಿಯರ್ ಡಿವಿಶನ್‌ನಲ್ಲಿ ನೇವಿ ವಿಂಗ್‌ಗೆ ಆಯ್ಕೆಯಾಗಿದ್ದಾರೆ.

ಶ್ರೀನಿವಾಸ್ ಪ್ರಕಾಶ ಪಡಸಾಲಿಮನಿಯವರಿಗೆ ಕಾಲೇಜು ಆಡಳಿತ ಮಂಡಳಿ, ಪಾಲಕರು ಹಾಗೂ ಕುಟುಂಬ ವರ್ಗದವರಾದ ಪ್ರಕಾಶ್ ವಾಸುದೇವ ಪಡಸಾಲಿಮನಿ, ಪ್ರೀತಿ ಪ್ರಕಾಶ್ ಪಡಸಾಲಿಮನಿ, ರೋಹಿಣಿ ಪ್ರಕಾಶ್ ಪಡಸಾಲಿಮನಿ, ವಾಸುದೇವ ಭಿಮಪ್ಪ ಪಡಸಾಲಿಮನಿ, ಶಕುಂತಲಾ ವಾಸುದೇವ ಪಡಸಾಲಿಮನಿ ಅಭಿನಂದನೆಗಳನ್ನು ತಿಳಿಸಿದ್ದಾರೆ.

## ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್‌ಗೆ ಪತ್ರ ಬರೆದ ಕೇಜ್ರಿವಾಲ್

■ ವಿಜಯಸಾಕ್ಷಿ ಸುದ್ದಿ, ನವದೆಹಲಿ

ಆಮ್ ಆದ್ಮಿ ಪಕ್ಷದ (ಎಎಪಿ) ಮುಖ್ಯಸ್ಥ ಹಾಗೂ ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರಿಗೆ ಪತ್ರ ಬರೆದಿದ್ದು, "ದೆಹಲಿಯಲ್ಲಿ ಮತಗಳನ್ನು ಖರೀದಿಸಲು ಬಿಜೆಪಿ ನಾಯಕರು ಹಣ ಹಂಚುತ್ತಿದ್ದಾರೆ. ಇದನ್ನು ಆರ್‌ಎಸ್‌ಎಸ್ ಬೆಂಬಲಿಸುತ್ತಾ?" ಎಂದು ಪ್ರಶ್ನಿಸಿದ್ದಾರೆ.

"ದೆಹಲಿಯಲ್ಲಿ ದಲಿತರು ಮತ್ತು ಪೂರ್ವಾಂಚಲಿಗಳ ಹೆಸರನ್ನು ಮತದಾರರ ಪಟ್ಟಿಯಿಂದ ದೊಡ್ಡ ಪ್ರಮಾಣದಲ್ಲಿ ಅಳಿಸಲಾಗುತ್ತಿದೆ. ಇದು ಪ್ರಜಾಪ್ರಭುತ್ವಕ್ಕೆ ಸರಿ ಎಂದು ಆರ್‌ಎಸ್‌ಎಸ್‌ಗೆ ಅನಿಸುತ್ತಿದೆಯಾ?" ಎಂದು ಕೇಜ್ರಿವಾಲ್ ಪತ್ರದಲ್ಲಿ ಕೇಳಿದ್ದಾಗಿ ವರದಿಯಾಗಿದೆ.

"ದೆಹಲಿ ಚುನಾವಣೆಯಲ್ಲಿ ಬಿಜೆಪಿ ಪರವಾಗಿ ಆರ್‌ಎಸ್‌ಎಸ್ ಮತ ಕೇಳಲಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಅದಕ್ಕೂ ಮೊದಲು, ಕಳೆದ ಕೆಲವು ದಿನಗಳಲ್ಲಿ ಬಿಜೆಪಿ ಮಾಡಿರುವ ತಪ್ಪುಗಳನ್ನು ಆರ್‌ಎಸ್‌ಎಸ್ ಬೆಂಬಲಿಸುತ್ತಾ? ಎಂಬುವುದನ್ನು ಜನರು ನಿಮ್ಮಿಂದ ತಿಳಿದುಕೊಳ್ಳಲು ಬಯಸಿದ್ದಾರೆ" ಎಂದು ಡಿಸೆಂಬರ್ 30ರಂದು ಬರೆದ ಪತ್ರದಲ್ಲಿ ಕೇಜ್ರಿವಾಲ್ ಪ್ರಶ್ನಿಸಿದ್ದಾರೆ ಎಂದು ವರದಿಯಾಗಿದೆ.

### ಗುಂಜಳ ರಸ್ತೆಯ ಜಮೀನುಗಳಲ್ಲಿ ಚಿರತೆ ಸಂಚಾರ । ರೈತ ಸಮುದಾಯದಲ್ಲಿ ಆತಂಕ

# ಒಂದು ಚಿರತೆಯ ಜಾಡನ್ನರಸಿ...

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಹೊರವಲಯದ ಗುಂಜಳ ರಸ್ತೆಯ ಜಮೀನುಗಳಲ್ಲಿ ಮಂಗಳವಾರ ಸಂಜೆ ಚಿರತೆಯೊಂದು ಸಂಚರಿಸಿರುವ ಬಗ್ಗೆ ಪ್ರತ್ಯಕ್ಷದರ್ಶಿಗಳು ಹೇಳಿರುವ ವಿಷಯ ಎಲ್ಲೆಡೆ ಹರಡಿ, ರೈತ ಸಮುದಾಯದಲ್ಲಿ





ಆತಂಕ ಮನೆ ಮಾಡಿದೆ.

ಪಟ್ಟಣದ ಹಳ್ಳದಕೇರಿ ಓಣಿಯ ರೈತ ಕುಮಾರ ಸಾಲಾವಳಿಮಠ ಎಂಬುವರು ಮಂಗಳವಾರ ಇಳಿಸಂಜೆ ತಮ್ಮ ಜಮೀನಲ್ಲಿ ಕೆಲಸ ಮಾಡುವ ವೇಳೆ ಚಿರತೆ ಕಂಡು ಬಂದಿರುವ ಬಗ್ಗೆ ವಿಷಯ ಹಂಚಿಕೊಂಡಿದ್ದಾರೆ. ಮಾಹಿತಿ ತಿಳಿದ ಅರಣ್ಯ ಇಲಾಖೆಯ ಸಿಬ್ಬಂದಿಗಳು ಬುಧವಾರ ಬೆಳಿಗ್ಗೆ ರೈತರೊಂದಿಗೆ ಚಿರತೆ ಸಂಚರಿಸಿದೆ ಎಂಬ ಸುತ್ತಮುತ್ತಲಿನ ಪ್ರದೇಶವನ್ನೆಲ್ಲ ಪರಿವೀಕ್ಷಣೆ ಮಾಡಿದ್ದಾರೆ. ಅದರ ಜಾಡು ಹಿಡಿದು ಪರೀಕ್ಷಿಸಿದ ವೇಳೆ ಈ ಪ್ರದೇಶದಲ್ಲಿ 2-3 ದಿನಗಳ ಹಿಂದೆ ಕುರಿಯೊಂದನ್ನು ಯಾವುದೋ ಪ್ರಾಣಿಗಳು ತಿಂದಿರುವುದು ಕಂಡುಬಂದಿದ್ದು, ಅಲ್ಲಿದ್ದ ಕೂದಲು, ಎಲುಬು ಕಂಡು ಬಂದಿವೆ. ಅಲ್ಲದೇ ಪ್ರತ್ಯಕ್ಷದರ್ಶಿ ರೈತರು ಹೇಳಿದ ಮಾಹಿತಿಯ ಜಾಡು ಹಿಡಿದು ಪರೀಕ್ಷಿಸಿದಾಗ ಚಿರತೆಯ ಹೆಜ್ಜೆ ಅಸ್ಪಷ್ಟವಾಗಿ ಕಂಡು ಬಂದಿರುವುದು ರೈತ ಸಮುದಾಯದಲ್ಲಿನ ಆತಂಕ ಮತ್ತಷ್ಟು ಹೆಚ್ಚಲು ಕಾರಣವಾಗಿದೆ.

ಸ್ಥಳ ಪರೀವೀಕ್ಷಣೆ ಮಾಡಿದ ವಲಯ ಅರಣ್ಯಾಧಿಕಾರಿ ರಾಮಪ್ಪ ಪೂಜಾರ, ಅರಣ್ಯ ಇಲಾಖೆಯ ಸಿಬ್ಬಂದಿ ಮಂಜುನಾಥ ಚೌಹಾಣ ಪ್ರತಿಕ್ರಿಯಿಸಿ, ರೈತರ ಹೇಳಿಕೆಯ ಆಧಾರದಲ್ಲಿ ರೈತರೊಂದಿಗೆ ಇಡೀ ಪ್ರದೇಶದ ಪರೀಕ್ಷಿಸಲಾಗಿ ಅಸ್ಪಷ್ಟ ಹೆಜ್ಜೆ ಗುರುತು ಮತ್ತು ಕಾಕತಾಳೀಯ ಎನ್ನುವಂತೆ ಇದೇ ಪ್ರದೇಶದಲ್ಲಿ ಯಾವುದೋ ಪ್ರಾಣಿ ಕುರಿಯೊಂದನ್ನು ತಿಂದು ಹಾಕಿರುವುದು ಕೊಂಚ ಗೊಂದಲಕ್ಕೆ ಕಾರಣವಾಗಿದೆ. ರೈತರು ನೋಡಿರುವುದು ಚಿರತೆಯೋ, ತೋಳವೋ, ಕತ್ತೆ ಕಿರುಬವೋ ಎಂಬ ಯಾವುದೇ ಸ್ಪಷ್ಟ ಮಾಹಿತಿಯಿಲ್ಲ ಎಂದರು.

ಕೆಲವು ದಿನಗಳ ಹಿಂದೆ ಜಿಲ್ಲೆಯ ಗಜೇಂದ್ರಗಡದಲ್ಲಿ ಒಂದು ಚಿರತೆಯನ್ನು ಸೆರೆ ಹಿಡಿಯಲಾಗಿತ್ತು. ಅಲ್ಲದೆ ಬಿಂಕದಕಟ್ಟಿ ಹಾಗೂ ಹರ್ತಿ ಗ್ರಾಮದ ಸುತ್ತಮುತ್ತ ಚಿರತೆ ಕಂಡು ಬಂದಿರುವ ಬಗ್ಗೆ ಕೇಳಿಬಂದಿತ್ತು. ಅಲ್ಲದೇ ಇದೇ ಮೊದಲ ಬಾರಿ ಲಕ್ಷ್ಮೇಶ್ವರ ಭಾಗದ ರೈತರ ಜಮೀನುಗಳಲ್ಲಿ ಚಿರತೆ ಕಂಡು ಬಂದಿರುವುದು ರೈತರಲ್ಲಿ ಭೀತಿಯನ್ನುಂಟು ಮಾಡಿದೆ. ಸದ್ಯ ರೈತರು ತಮ್ಮ ಜಮೀನುಗಳಲ್ಲಿಯೇ ಮೆಣಸಿನಕಾಯಿ ಮತ್ತು ಹಿಂಗಾರಿನ ಬೆಳೆ ಸಂರಕ್ಷಣೆಗಾಗಿ ಜಾನುವಾರುಗಳೊಂದಿಗೆ ಬೀಡು ಬಿಟ್ಟಿರುತ್ತಾರೆ. ಚಿರತೆ ಕಂಡು ಬಂದಿರುವ ವಿಷಯ ರೈತರನ್ನು ಚಿಂತೆಗೀಡು ಮಾಡಿದೆ. ಆದ್ದರಿಂದ ಅರಣ್ಯ ಇಲಾಖೆ ಚಿರತೆಯ ಸಂಚಾರದ ಬಗ್ಗೆ ಸ್ಪಷ್ಟ ಮಾಹಿತಿ ಕಲೆಹಾಕಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ರೈತರಾದ ನಿಂಗಪ್ಪ ಬನ್ನಿ, ಮಂಜುನಾಥ ಕೊಟಗಿ, ಶಿವಣ್ಣ ಕಟಗಿ, ಸಂಗಯ್ಯ ಸಾಲಾವಳಿಮಠ, ಕಿಟ್ಟಣ್ಣ ಪಾಟೀಲ, ನಾಗಪ್ಪ ರಡ್ಡೇರ, ಸೋಮಣ್ಣ ಕಮತದ, ರಾಘು ಕರೆತ್ತಿನ, ಗಂಗಾಧರ ಅಂಕಲಿ, ರಾಜು ಮುಳಗುಂದ, ಫಕ್ಕೀರಪ್ಪ ಕೊಡ್ಲಿ, ಈರಪ್ಪ ಕಟ್ಟಿಮನಿ, ಚನ್ನವೀರಗೌಡ ಪಾಟೀಲ ಮತ್ತಿತರರು ಒಕ್ಕೊರಲಿನ ಮನವಿ ಮಾಡಿದ್ದಾರೆ.

ಈ ಭಾಗದ ರೈತರು ಎಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು. ಯಾವುದೇ ಸಂದರ್ಭದಲ್ಲಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದರೂ ಅಗತ್ಯ ಕ್ರಮ ಕೈಗೊಳ್ಳುತ್ತೇವೆ. ರಾತ್ರಿ ವೇಳೆ ಹೊಲದಲ್ಲಿ ಬೀಡುಬಿಟ್ಟಿರುವ ರೈತರು ಹಾಗೂ ಕುರಿಗಾಹಿಗಳು ಬ್ಯಾಟರಿ ಬಳಕೆ, ಬೆಂಕಿ ಹಾಕುವದು ಸೇರಿ ಅಗತ್ಯ ಮುಂಜಾಗೃತೆ ಕ್ರಮ ವಹಿಸಬೇಕು. ಈ ಬಗ್ಗೆ ಇಲಾಖೆಯೂ ಸಹ ನಿರ್ಲಕ್ಷ್ಯ ತೋರದೇ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ವಲಯ ಅರಣ್ಯಾಧಿಕಾರಿ ರಾಮಪ್ಪ ಪೂಜಾರ ತಿಳಿಸಿದರು.

### ಅಮಿತ್ ಶಾ'ರನ್ನು ಸಚಿವ ಸ್ಥಾನದಿಂದ ವಜಾಗೊಳಿಸಲು ಆಗ್ರಹಿಸಿ ಬೃಹತ್ ಪ್ರತಿಭಟನೆ

# ಸಂವಿಧಾನ ವಿರೋಧಿಗಳನ್ನು ಸಂಪುಟದಿಂದ ಕೈಬಿಡಿ

■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಡಾ. ಬಿ.ಆರ್. ಅಂಬೇಡ್ಕರ್ ಕುರಿತು ಅವಹೇಳನ ಮಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾರನ್ನು ಸಂಪುಟದಿಂದ ವಜಾಗೊಳಿಸಲು ಒತ್ತಾಯಿಸಿ ಕರ್ನಾಟಕ ಮಾದಿಗ ರಕ್ಷಣಾ ವೇದಿಕೆ ಮತ್ತು ಕರ್ನಾಟಕ ಜನಶಕ್ತಿ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಮುಖಂಡರು ಜಿಲ್ಲಾಧಿಕಾರಿಗಳ ಅನುಪಸ್ಥಿತಿಯಲ್ಲಿ ತಹಸೀಲ್ದಾರ್ ವಿಠ್ಠಲ್ ಚೌಗಲ್ ಅವರ ಮುಖಾಂತರ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.

ನಗರದ ಅಶೋಕ ವೃತ್ತದಲ್ಲಿ ಮಾನವ ಸರಪಳಿ ರಚಿಸಿ, ಪ್ರತಿಭಟನಾ ಮೆರವಣಿಗೆಯ ಮೂಲಕ ಬಸವೇಶ್ವರ ವೃತ್ತಕ್ಕೆ ತೆರಳಿ ಕೋರೆಗಾಂವ್ ವಿಜಯೋತ್ಸವದ ಘೋಷಣೆ ಕೂಗಿದರು.

ಅಮಿತ್ ಶಾರನ್ನು ಇದುವರೆಗೆ ಪ್ರಧಾನಿ ನರೇಂದ್ರ ಮೋದಿ ಸಂಪುಟದಲ್ಲೇ ಉಳಿಸಿಕೊಂಡಿರುವುದು ಅವರ ಧೋರಣೆ ಏನು ಎಂಬುದರ ಸೂಚಕವಾಗಿದೆ. ಬಿಜೆಪಿ ಮತ್ತು ಆರೆಸ್ಸೆಸ್ ಎಂದೆಂದಿಗೂ ಡಾ.ಅಂಬೇಡ್ಕರ್ ಮತ್ತು ಸಂವಿಧಾನದ ವಿರೋಧ ಮಾಡುತ್ತಲೇ ಬಂದಿವೆ. ಅಮಿತ್ ಶಾ ಅಂಬೇಡ್ಕರರನ್ನು ಅವಹೇಳನ ಮಾಡಿದ್ದರ ಹಿಂದೆ ಇರುವುದು, ಮಾನವತೆ, ಪ್ರಜಾತಂತ್ರ ನ್ಯಾಯದ ಕುರಿತು ಅವರ ಅಸಹನೆ. ಈ ಅಸಹನೆಯನ್ನು ವ್ಯಕ್ತಪಡಿಸಿದ ಅಮಿತ್ ಶಾ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಎಲ್ಲರೂ ನಿರೀಕ್ಷಿಸಿದ್ದರು. ಆದರೆ, ಇದುವರೆಗೆ ಅಂತಹ ಕ್ರಮ ಆಗಿಲ್ಲ. ಈ ಹಿನ್ನೆಲೆಯಲ್ಲಿ ನಮ್ಮ ಸಂಘಟನೆಗಳು ಗೃಹ ಸಚಿವ ಅಮಿತ್ ಶಾ ಅವರನ್ನು ಕೇಂದ್ರ ಸಚಿವ ಸಂಪುಟದಿಂದ ವಜಾ ಮಾಡಬೇಕೆಂದು ಒತ್ತಾಯಿಸುತ್ತದೆ ಎಂದು ಮನವಿ ಸಲ್ಲಿಸಿದರು.




ಪ್ರತಿಭಟನಾ ಮೆರವಣಿಗೆಯಲ್ಲಿ ಪ್ರಮುಖರಾದ ಹುಲುಗಪ್ಪ ಹ್ಯಾಟಿ, ಕೆ.ದುರ್ಗೇಶ್, ಯಮುನಾ ಚಳ್ಳೂರು, ಯಮನೂರು ಇಳಿಗನೂರು, ಕೌಸರ್ ಕೋಲ್ಕಾರ್, ಮಂಜುನಾಥ ಮಳ್ಳನವರ, ಶಿವಕುಮಾರ್ ನಡುವಿನಮನಿ, ಸುಭಾಷ್ ಹಕ್ಕಾಪುರ ಹನಕುಂಟಿ, ಸಂತೋಷ್ ಕಳಸಣ್ಣವರ, ವೆಂಕಟೇಶ ಮಳ್ಳನವರ, ಯಮನೂರಪ್ಪ ಬಡಹಳ್ಳಿ, ಯಮನೂರಪ್ಪ ದೇವರಮನಿ, ಪ್ರವೀಣ್ ನಡುವಿನಮನಿ, ಬಸವರಾಜ್ ಬಿಕನಹಳ್ಳಿ, ಗುಡದಪ್ಪ ಭಂಗಿ, ಬಸವರಾಜ್ ಪೂಜಾರ್ ನರೇಗಲ್, ಮಖಬೂಲ್ ರಾಯಚೂರು, ಬಂದೆ ನವಾಝ ಮನಿಯಾರ್, ಕೆ.ಬಿ. ಗೋನಾಳ, ಸಂಜೀವಪ್ಪ ಹೊಸಳ್ಳಿ, ತುಕಾರಾಮ್ ಪಾತ್ರೋಟಿ, ಮೌಲಾ ಹುಸೇನ್ ಹಣಗಿ, ನೂರ ಸಾಬ್ ಹೊಸಮನಿ, ಪಾನಿಶಾ ಮಕಾಂದಾರ್, ಶಮಶುದ್ದೀನ್ ಮಕಾಂದಾರ್, ಹನುಮಂತ ಹನುಮಸಾಗರ, ಮಹೆಬೂಬ್ ಅಲಿ, ಹುಸೇನ್ ಬಾಷಾ ತಹಸೀಲ್ದಾರ್, ರಾಜಪ್ಪ ಚೌಹಾಣ್, ಜಾಫರ್ ಕುರಿ, ಯೋಗೇಶ್ ಬಿಕನಹಳ್ಳಿ, ವೀರೇಶ್ ಲಕಮಾಪುರ್, ಸಂಜಯ್ ದಾಸ್ ಕೌಜಗೇರಿ, ರಾಮಲಿಂಗಯ್ಯ ಶಾಸ್ತ್ರಿ ಮಠ, ಗಾಳೆಪ್ಪ ಮುಂಗೋಲಿ, ಗಾಳೆಪ್ಪ ಬಿಕನಹಳ್ಳಿ, ನಜೀರ್ ಅಹ್ಮದ್ ಅಧೂನಿ, ಶೋಭಾ ಯಮನೂರಪ್ಪ, ಸಜ್ಜಾದ ಸಾಬ್ ಕವಲೂರ ಪಲ್ವನ್, ಮಲ್ಲಿಕಾರ್ಜುನ್ ಪೂಜಾರ್ ಮುಂತಾದವರು ಭಾಗವಹಿಸಿದ್ದರು.

ಬಂಡಾಯ ಸಾಹಿತಿ ಅಲ್ಲಮ ಪ್ರಭು ಬೆಟ್ಟದೂರು, ಅಖಿಲ ಭಾರತ ಕಾರ್ಮಿಕ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಸವರಾಜ್ ಶೀಲವಂತರ್, ಜನಪರ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಂಚಾಲಕ ಎಸ್.ಎ. ಗಫಾರ್, ಕರ್ನಾಟಕ ಮಾದಿಗ ರಕ್ಷಣಾ ವೇದಿಕೆ ರಾಜ್ಯ ಅಧ್ಯಕ್ಷ ಕರಿಯಪ್ಪ ಗುಡಿಮನಿ, ಮಲ್ಲಿಕಾರ್ಜುನ್ ಹಲಗೇರಿ ಮುಂತಾದವರು ಮಾತನಾಡಿದರು. ಕರ್ನಾಟಕ ಮಾದಿಗ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಮುದುಕಪ್ಪ ಹೊಸಮನಿ ಮನವಿ ಓದಿ ಅರ್ಪಿಸಿದರು.

### ರಾಜ್ಯ ಮಟ್ಟದ ಎಂ.ಟಿ.ಬಿ. ಸೈಕ್ಲಿಂಗ್ ಚಾಂಪಿಯನ್‌ಶಿಪ್

## ಜಿಲ್ಲೆಯ ಸೈಕ್ಲಿಂಗ್ ಕ್ರೀಡಾಪಟುಗಳ ಸಾಧನೆ

■ ವಿಜಯಸಾಕ್ಷಿ ಸುದ್ದಿ, ಗದಗ

ಡಿ.27ರಿಂದ 29ರವರೆಗೆ ಬೆಂಗಳೂರಿನಲ್ಲಿ ನಡೆದ 19ನೇ ರಾಜ್ಯ ಮಟ್ಟದ ಎಂ.ಟಿ.ಬಿ ಸೈಕ್ಲಿಂಗ್ ಚಾಂಪಿಯನ್‌ಶಿಪ್‌ನ ಗ/14, ಅಡಿಠ ಅಂಣಟಿಣಡಿಥಿ ಖಿಟಜ ಖಿಡುಚಿಟನಲ್ಲಿ ಗದಗ ಜಿಲ್ಲೆಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ವಸತಿ ನಿಲಯದ ಬಾಲಕಿಯರಾದ ಪ್ರಿಯಾಂಕಾ ಬೆಳ್ಳಿ ಪದಕ, ಸೌಂದರ್ಯ ಕಂಚಿನ ಪದಕ ಹಾಗೂ ಭಾಗ್ಯಾ ಮೇಲ್ಮನಿ ಇವರು 5ನೇ ಸ್ಥಾನ ಗಳಿಸಿ ವಿಜೇತರಾಗಿದ್ದಾರೆ. ಬಾಲಕರ ವಿಭಾಗದಲ್ಲಿ ಹನುಮಂತ ಕಲಿ ಬೆಳ್ಳಿ ಪದಕ ಹಾಗೂ ಶಿವಾನಂದ ಬಂಡಿ 4ನೇ ಸ್ಥಾನ ಗಳಿಸಿದ್ದಾರೆ.

ಗ/16, ಅಡಿಠ ಅಂಣಟಿಣಡಿಥಿ ಖಿಟಜ ಖಿಡುಚಿಟ ನಲ್ಲಿ ಬಾಲಕಿಯರ ವಿಭಾಗದಲ್ಲಿ ಭಾರತಿ ಭಜಂತ್ರಿ 5ನೇ ಸ್ಥಾನ ಹಾಗೂ ಪಲ್ಲವಿ ಕುರಿ 6ನೇ ಸ್ಥಾನ ಗಳಿಸಿದ್ದು, ಗ/18, ಅಡಿಠ ಅಂಣಟಿಣಡಿಥಿ ಖಿಟಜ ಖಿಡುಚಿಟನಲ್ಲಿ ಪವಿತ್ರಾ



ಕುರ್ತಕೋಟಿ, ಚಿನ್ನದ ಪದಕ ಗಳಿಸಿದ್ದಾರೆ.

ಕ್ರೀಡಾ ವಸತಿ ನಿಲಯದ ಸೈಕ್ಲಿಂಗ್ ಕ್ರೀಡಾಪಟುಗಳಿಗೆ ಹಾಗೂ ತರಬೇತುದಾರರಿಗೆ ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ. ಪಾಟೀಲ, ಜಿಲ್ಲಾಧಿಕಾರಿ ಗೋವಿಂದರಡ್ಡಿ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭರತ್ ಎಸ್., ಜಿ.ಪಂ ಮಾಜಿ ಅಧ್ಯಕ್ಷರಾದ ಸಿದ್ದಲಿಂಗೇಶ್ವರ ಪಾಟೀಲ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಶರಣು ಗೋಗೇರಿ, ಜಿಲ್ಲಾ ಅಮೆಚ್ಯೂರ್ ಸೈಕ್ಲಿಂಗ್ ಅಸೋಸಿಯೇಶನ್ ಪದಾಧಿಕಾರಿಗಳು ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಿಬ್ಬಂದಿಗಳು ಅಭಿನಂದನೆ ಸಲ್ಲಿಸಿದ್ದಾರೆ.

### ತಹಸೀಲ್ದಾರ ಕಚೇರಿಯಲ್ಲಿ ಜಕಣಾಚಾರ್ಯ ಸಂಸ್ಮರಣಾ ದಿನ

## ಜಕಣಾಚಾರ್ಯರ ಕೊಡುಗೆ ಅಜರಾಮರ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ದೇಶದ ಸಂಸ್ಕೃತಿ, ಕಲೆ, ವಾಸ್ತುಶಿಲ್ಪ, ಪರಂಪರೆಯ ಶ್ರೀಮಂತಿಕೆ ಹೆಚ್ಚಿಸುವಲ್ಲಿ ದೇವಮಾನವ ಅಮರಶಿಲ್ಪಿ ಜಕಣಾಚಾರ್ಯರ ಕೊಡುಗೆ ಅಜರಾಮರ ಎಂದು ತಹಸೀಲ್ದಾರ ವಾಸುದೇವ ಎಂ.ಸ್ವಾಮಿ ಹೇಳಿದರು.

ಅವರು ಬುಧವಾರ ಪಟ್ಟಣದ ತಹಸೀಲ್ದಾರ ಕಚೇರಿಯಲ್ಲಿ ಜಕಣಾಚಾರ್ಯ ಸಂಸ್ಮರಣಾ ದಿನದ ಅಂಗವಾಗಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿ, ವಿಶ್ವಕರ್ಮರ ಪಂಚ ಕಸುಬುಗಳು ಯಾವುದೇ ಧರ್ಮ, ಜಾತಿ, ಕುಲಕ್ಕೆ ಸೀಮಿತವಾಗಿರದೇ ನಾಗರಿಕರ ಬದುಕಿಗೆ ಆಧಾರಸ್ತಂಭವಾಗಿವೆ. ನಮ್ಮ ಸಂಸ್ಕೃತಿ, ಪರಂಪರೆ, ಇತಿಹಾಸ, ಕಲೆಯನ್ನು ತಮ್ಮ ಕೌಶಲ್ಯದ ಮೂಲಕ ಕಲ್ಲು, ಕಟ್ಟಿಗೆ ಇತರೆ ವಸ್ತುಗಳಲ್ಲಿ ಜೀವಂತವಾಗಿರಿಸಿದ್ದರಿಂದಲೇ ಅವರು ಅಮರಶಿಲ್ಪಿಯಾಗಿದ್ದಾರೆ.




ಬೇಲೂರು-ಹಳೆಬೀಡುಗಳಂತಹ ವಿಶ್ವ ಶ್ರೇಷ್ಠ ಅನೇಕ ಶಿಲ್ಪಕಲಾ ದೇವಸ್ಥಾನಗಳ ನಿರ್ಮಾಣ ಕಾರ್ಯಕ್ಕೆ ತಮ್ಮನ್ನೇ ಸಮರ್ಪಿಸಿಕೊಂಡ ದೇವಮಾನವರ ಸ್ಮರಣೆ ಮುಖ್ಯವಾಗಿದೆ ಎಂದರು.

ಈ ವೇಳೆ ಸೂರಣಗಿ ಗ್ರಾಮದ ಮೌನೇಶ ಚನ್ನಪ್ಪ ಬಡಿಗೇರ ಅವರ ವೃತ್ತಿ ಸೇವೆ ಪರಿಗಣಿಸಿ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ತಾಲೂಕ ಘಟಕದಿಂದ 'ಅಮರಶಿಲ್ಪಿ ಜಕಣಾಚಾರಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಮಾಜದ ತಾಲೂಕಾಧ್ಯಕ್ಷ ಈರಣ್ಣ ಬಡಿಗೇರ, ಗ್ರೇಡ್-2 ತಹಸೀಲ್ದಾರ ಮಂಜುನಾಥ ಅಮಾಸಿ, ಬಾಸ್ಕರ್ ಸೊರಟೂರ, ರಾಮಚಂದ್ರ ಬಡಿಗೇರ, ಗಂಗಾಧರ ಬಾಲೆಹೊಸೂರ, ಮೋಹನ್ ಸುತಾರ, ಮೌನೇಶ ಬಾಲೆಹೊಸೂರ, ದೇವಿಂದ್ರಪ್ಪ ಬಾಲೆಹೊಸುರ, ಧರ್ಮಣ್ಣ ಬಡಿಗೇರ, ಗಣೇಶಪ್ಪ ಹುಲಬಜಾರ, ಅಶೋಕ ಸೊರಟೂರ, ಬಸಣ್ಣ ಬಡಿಗೇರ, ಶ್ರೀಧರ್ ಪತ್ತಾರ, ಪ್ರೇಮಕ್ಕ ಬಡಿಗೇರ, ಶಶಿಕಲಾ ಬಡಿಗೇರ, ಉಮ್ಮಕ್ಕ ಸೊರಟೂರ, ಭಾಗ್ಯಶ್ರೀ ಬಡಿಗೇರ, ಶ್ರೀಕಾಂತ ಪತ್ತಾರ, ರಮೇಶ ಬಡಿಗೇರ, ಮನೋಹರ್ ಪತ್ತಾರ ಸೇರಿ ಸಮಾಜ ಬಾಂಧವರು, ತಹಸೀಲ್ದಾರ ಕಚೇರಿ ಸಿಬ್ಬಂದಿಗಳು ಇದ್ದರು.

ವಿಶ್ವಕರ್ಮ ಸಮಾಜದ ಗುರುಗಳಾದ ಸೂರಣಗಿಯ ಭಾಸ್ಕರ್ ಸ್ವಾಮೀಜಿ ಮಾತನಾಡಿ, ದೇಶದ ಸಾಂಸ್ಕೃತಿಕ, ಧಾರ್ಮಿಕ ಲೋಕದ ಶ್ರೀಮಂತಿಕೆಗೆ ಕಾರಣರಾದ ಜಕಣಾಚಾರ್ಯರ ಕುರಿತ ಅಧ್ಯಯನ, ಸಂಶೋಧನೆಗೆ ಸರ್ಕಾರ ಮುಂದಾಗಬೇಕು. ವಿಶ್ವಕರ್ಮ ಸಮಾಜದ ಯುವಕರು ಕಲಾ ಕ್ಷೇತ್ರದಲ್ಲಿ ಸಾಧನೆ ಮಾಡಲು ಸಹಾಯ-ಸಹಕಾರ, ಅವಕಾಶ ಕಲ್ಪಿಸಬೇಕು. ಜಕಣಾಚಾರ್ಯರ ಸಂಸ್ಮರಣಾ ದಿನವನ್ನು ಸರ್ಕಾರವೇ ಆಚರಿಸುತ್ತಿರುವುದು ಸಂತಸ ತಂದಿದೆ ಎಂದರು.

## ಸಂಪಾದಕೀಯ

# ಹೊಸ ವರ್ಷಕ್ಕೆ ಹೊಸ ಸಾರಥಿಗಳು

2025 ಹೊಸ ವರ್ಷವನ್ನ ದೇಶಾದ್ಯಂತ ಅತ್ಯಂತ ಸಡಗರ ಸಂಭ್ರಮದಿಂದ ಸ್ವಾಗತಿಸಲಾಗಿದೆ. ಒಂದು ವರ್ಗದ ಯುವಕರು ಮೋಜು ಮಸ್ತಿಯ ಮೂಲಕ ಹೊಸ ವರ್ಷವನ್ನು ಬರಮಾಡಿಕೊಂಡಿದ್ದಾರೆ. ಹೊಸ ಕ್ಯಾಲೆಂಡರ್ ವರ್ಷ ಎನ್ನುವುದು ಯುವಕರಿಗೆ ಒಂದು ದಿನದ ಮಟ್ಟಿಗೆ ಹುಮ್ಮಸ್ಸು ತಂದಿದೆ. ಆದರೆ ರಾಜಕಾರಣದಲ್ಲಿ ಬದಲಾವಣೆ ಬೀಸುವ ಸೂಚನೆ ನೀಡಿದೆ.

ರಾಜ್ಯ ರಾಜಕಾರಣದಲ್ಲಿ ಸಂಕ್ರಾಂತಿಯ ನಂತರ ಸಾರಥಿಗಳು ಬದಲಾಗುವ ಸಾಧ್ಯತೆಗಳು ನಿಚ್ಚಳವಾಗುತ್ತಿವೆ. ಕಾಂಗ್ರೆಸ್– ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಹೊಸ ರಾಜ್ಯಾಧ್ಯಕ್ಷರ ಆಯ್ಕೆ ಚರ್ಚೆಗಳು ಹೊಸ ವರ್ಷದ ಹೊಸ ರಾಜಕೀಯ ಬೆಳವಣಿಗೆಗಳಿಗೆ ನಾಂದಿ ಹಾಡಲಿದೆ.

ಕಾಂಗ್ರೆಸ್ ಪಕ್ಷದಲ್ಲಿ ಡಿಕೆ ಶಿವಕುಮಾರ್ ಅಧಿಕಾರಾವಧಿ ಲೋಕಸಭೆ ಚುನಾವಣೆ ವರೆಗೆ ವಿಸ್ತರಿಸಲಾಗಿತ್ತು. ಸದ್ಯ ಚುನಾವಣೆಯ ಮುಗಿದು ಎಲ್ಲವೂ ನಿರಳವಾಗಿರುವ ಹಿನ್ನೆಲೆಯಲ್ಲಿ, ಹೊಸ ಅಧ್ಯಕ್ಷರ ಆಯ್ಕೆ ಖಚಿತವಾಗಿದೆ. ಪಕ್ಷದ ಮೇಲೆ ಹಿಡಿತ ಹೊಂದಿರುವ ಡಿಕೆ ಶಿವಕುಮಾರ್ ತಮ್ಮ ನಂತರವೂ ಅದೇ ಹಿಡಿತ ಇರಬೇಕು ಎನ್ನುವ ಕಾರಣಕ್ಕೆ ಡಿಕೆ ಸುರೇಶಗೆ ಪಟ್ಟ ಕಟ್ಟುವ ತಂತ್ರಗಾರಿಕೆ ನಡೆಸಿದ್ದಾರೆ.

ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣದ ನಾಯಕರು ಸಹ ಕೆಪಿಸಿಸಿ ಅಧ್ಯಕ್ಷ ಗಾದಿ ಮೇಲೆ ಕಣ್ಣಿಟ್ಟಿದ್ದಾರೆ. ಡಿಕೆ ಶಿವಕುಮಾರ್ ಬಣದಲ್ಲಿ ಗುರುತಿಸಿಕೊಂಡವರು ಸಹ ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳಾಗಿದ್ದಾರೆ.

ಇನ್ನು ಬಿಜೆಪಿಯಲ್ಲಿ ವಿಜಯೇಂದ್ರ ಬದಲಾವಣೆ ಬಹುತೇಕ ನಿಶ್ಚಿತವಾಗಿದೆ. ಆದರೆ ವಿಜಯೇಂದ್ರ ನಂತರ ಯಾರು ಎನ್ನುವುದು ಯಕ್ಷಪ್ರಶ್ನೆಯಾಗಿದೆ. ಅದೇ ರೀತಿ ಸತತ ಸೋಲಿನಿಂದ ಕಂಗೆಟ್ಟಿರುವ ಜೆಡಿಎಸ್ ಯುವನಾಯಕ ನಿಖಿಲ್ ಕುಮಾರಸ್ವಾಮಿಗೆ, ಜೆಡಿಎಸ್ ರಾಜ್ಯಾಧ್ಯಕ್ಷ ಪಟ್ಟ ಕಟ್ಟುವುದು ಬಹುತೇಕ ಅಂತಿಮಗೊಂಡಿದೆ.

ಒಟ್ಟಾರೆ ಸಂಕ್ರಾಂತಿ ನಂತರ ಎಲ್ಲ ರಾಜಕೀಯ ಪಕ್ಷಗಳ ಸಾರಥಿಗಳು ಬದಲಾಗಲಿದ್ದು, ಹೊಸ ರಾಜಕೀಯ ಬೆಳವಣಿಗೆಗಳಿಗೆ ಸಾಕ್ಷಿಯಾಗಲಿದೆ. ಆದರೆ ಹೊಸ ವರ್ಷದಲ್ಲಿ, ಹೊಸದಾಗಿ ಅಧಿಕಾರ ವಹಿಸಿಕೊಳ್ಳುವ ನಾಯಕರು, ಮೌಲ್ಯಯುತ ರಾಜಕಾರಣಕ್ಕೆ ಮುನ್ನುಡಿ ಬರೆಯುವಂತಾಗಲಿ. ಕಳೆದೊಂದು ವರ್ಷದಲ್ಲಿ ರಾಜ್ಯದಲ್ಲಾದ ರಾಜಕೀಯ ಬೆಳವಣಿಗೆಗಳು, ಮುಂದಿನ ದಿನಗಳಲ್ಲಾದರೂ ನಡೆಯದಂತೆ ನೋಡಿಕೊಳ್ಳುವ ಜವಾಬ್ದಾರಿ ಹೊತ್ತುಕೊಳ್ಳಲಿ.



ಗದಗ: ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಧಿಕಾರದ ಅಧ್ಯಕ್ಷ ಅಕ್ಬರಸಾಬ್ ಬಬರ್ಚಿ ಅವರಿಗೆ ನೂತನ ವರ್ಷದ ಶುಭಾಶಯ ಕೋರಿದ ಗದಗ ಜಿಲ್ಲಾ ಕಾಂಗ್ರೆಸ್ ಮುಖಂಡ, ಎಸ್‌ಎಸ್‌ಕೆ ಸಮಾಜದ ಗೌರವ ಕಾರ್ಯದರ್ಶಿ ವಿನೋದ್ ಆರ್ ಸಿದ್ಲಿಂಗ್ ಹಾಗೂ ಲಕ್ಷ್ಮಣ ಜೋಗದಂಡಕರ್. ಈ ಸಂದರ್ಭದಲ್ಲಿ ಆಯುಕ್ತರಾದ ಎಸ್ ವಿ. ಬೇವೂರ್, ತೇರದಾಳ, ಅಶೋಕ್ ಬಬಲಿ ಸೇರಿದಂತೆ ಇತರರು ಇದ್ದರು.

### ಸವಾಲುಗಳನ್ನು ಧೈರ್ಯದಿಂದ ಎದುರಿಸುವ ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಿ

# ಬಾಳೊಂದು ಹೋರಾಟ ಮರೆಯದಿರಿ...



ಬೆಳಗುವ ಬೆಳಕಿನ ಹಿಂದೆ ಯಾರೋ ಮಾಡಿದ ಹಣತೆ, ಇನ್ಯಾರದೋ ಎಣ್ಣೆ, ಇನ್ಯಾರೋ ಬೆಳೆದ ಹತ್ತಿ ಇರುತ್ತದೆ. ಅಂತೆಯೇ ನಮ್ಮ ಜೀವನ ಬೆಳಗಲು ಕೂಡ ಹಲವಾರು ಗುರು–ಹಿರಿಯರ ಬೆಂಬಲ ಇದ್ದೇ ಇರುತ್ತದೆ. ವಿದ್ಯಾರ್ಥಿ ಜೀವನದಲ್ಲಿ ಚಿಕ್ಕ ವಯಸ್ಸಿನಲ್ಲಿ ತಂದೆ–ತಾಯಿಯ ಪ್ರೋತ್ಸಾಹದಿಂದ ಮುಂದೆ ಬರುತ್ತಾರೆ. ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು ಎನ್ನುವಂತೆ ಮುಂದೆ ವಿದ್ಯಾರ್ಥಿ ಜೀವನದಲ್ಲಿ ಗುರುಗಳ ಪಾತ್ರ ಬಹುಮುಖ್ಯವಾಗಿದೆ.

ಈ ಸ್ಪರ್ಧಾತ್ಮಕ ಯುಗದಲ್ಲಿ ಜ್ಞಾನವು ಮಹತ್ವದ ಪಾತ್ರ ಹೊಂದಿದೆ. ಹಾಗೆಯೇ ಒಬ್ಬ ವಿದ್ಯಾರ್ಥಿ ತನ್ನ ಗುರಿ ಸಾಧಿಸಬೇಕಾದರೆ ಗುರುಗಳ ಪಾತ್ರವು ಬಹುಮುಖ್ಯವಾಗಿದೆ. ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸಲು ಮತ್ತು ಅವರ ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಧೈರ್ಯದಿಂದ ಎದುರಿಸುವ ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಬೇಕು. ಅದರ ಜೊತೆಗೆ ಸಂಸ್ಕಾರವು ಕೂಡಾ ವಿದ್ಯಾರ್ಥಿ ಜೀವನದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ನಮ್ಮ ಪೂರ್ವಜರ ಆಚಾರ–ವಿಚಾರಗಳನ್ನು ನಡೆಸಿಕೊಂಡು ಹೋಗಬೇಕು. ನಾವು ಎಷ್ಟೇ ಪದವಿಯನ್ನು ಪಡೆದರೂ ಸಹ ನಮ್ಮ ಗುರು–ಹಿರಿಯರ ಆಚಾರ–ವಿಚಾರ ಮತ್ತು ಸಂಸ್ಕಾರವನ್ನು ಮರೆಯಬಾರದು.

ವಿದ್ಯಾರ್ಥಿಯ ಜೀವನದಲ್ಲಿ ವಿದ್ಯೆ ಮತ್ತು ಸಂಸ್ಕಾರ ಅಷ್ಟೇ ಮುಖ್ಯವಾಗಿದೆ. ಹಾಗೇ ಸಮಯವು ಕೂಡಾ ಅಷ್ಟೇ ಮುಖ್ಯ. ಈ ಕಲಿಯುಗದಲ್ಲಿ ವಿದ್ಯಾರ್ಥಿಗಳು ಚಿಕ್ಕ ವಯಸ್ಸಿನಲ್ಲಿ ಗುರು–ಹಿರಿಯರ ನಡತೆಯ ಮಾರ್ಗದರ್ಶನದಲ್ಲಿ ಜ್ಞಾನವನ್ನು ಪಡೆದುಕೊಂಡಿರುತ್ತಾರೆ. ನಮ್ಮ ಶಾಲಾ–ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸುವ ಮತ್ತು ಅವರು ತಮ್ಮ ಜೀವನದ ಸತ್ಯವನ್ನು ಧೈರ್ಯ ಮತ್ತು ಭರವಸೆಯಿಂದ ಎದುರಿಸುವಂತಹ ಶಿಕ್ಷಣವನ್ನು ಒದಗಿಸಿದ್ದಾರೆ.

ಪ್ರಾರಂಭದಲ್ಲಿ ವಿದ್ಯೆ ಎಂಬುದು ಜ್ಞಾನ ಸಂಪಾದನೆಗೆ ಸೀಮಿತವಾಗಿತ್ತು. ಅನಂತರ ವಿದ್ಯೆಯ ಪರಿಭಾಷೆ ವಿಸ್ತಾರವಾಗುತ್ತಾ ಇಂದು ವಿದ್ಯೆ 'ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿ' ಎಂದು ವ್ಯಾಖ್ಯಾನಿಸಲಾಗುತ್ತಿದೆ. 'ವಿದ್' ಎಂದರೆ ಜ್ಞಾನ. ಅದರ ಅಭ್ಯಾಸ ಮಾಡುವುದೇ ವಿದ್ಯಾಭ್ಯಾಸ. ಪ್ರಾರಂಭದಲ್ಲಿದ್ದ ವಿದ್ಯೆಯ ಪರಿಭಾಷೆ ವಿಸ್ತಾರಗೊಂಡಂತೆ ಅದರ ಗುರಿಯೂ ಹಿಗ್ಗುತ್ತಾ ಸಾಗಿದೆ. ಆದರೂ ಜ್ಞಾನ ಎಂಬುದು ಶಕ್ತಿಯಾಗಿಯೇ ಉಳಿದಿದೆ. ಆದುದರಿಂದ ಪ್ರಪಂಚದಲ್ಲಿ 'ಜ್ಞಾನವೇ ಶಕ್ತಿ' ಎಂದು ಪರಿಗಣಿಸಲಾಗಿದೆ.

ಪುಷ್ಟಿಕರವಾದ ಆಹಾರ ದೇಹಕ್ಕೆ ಶಕ್ತಿ ನೀಡುವಂತೆ ಸಮೃದ್ಧವಾದ ಹಾಗೂ ಪ್ರಬುದ್ಧವಾದ ಜ್ಞಾನವು ಮಾನಸಿಕ ಶಕ್ತಿಗೆ ಕಾರಣವಾಗುತ್ತದೆ. ಇವೆರಡರ ಸಮತೋಲನವೇ ವಿದ್ಯಾಭ್ಯಾಸದ ಗುರಿಯಾಗಿ ರೂಪುಗೊಳ್ಳುತ್ತದೆ. ಸಮರ್ಥವಾದ ಮಾನಸಿಕ ಶಕ್ತಿಗಳಿಗೆ ಅಗತ್ಯವಾದ ಶಾರೀರಿಕ ಶಕ್ತಿ ಬೇಕು. ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಗೆ ಗಮನ ನೀಡಲಾಗುತ್ತದೆ. ಈ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ನಗರ ಪ್ರದೇಶದಿಂದ ಮತ್ತು ಗ್ರಾಮೀಣ ಪ್ರದೇಶದಿಂದ ಬಂದು ಸರ್ಕಾರಿ ಹುದ್ದೆ ಪಡೆಯಲು ವಿದ್ಯಾರ್ಥಿಗಳು ಪ್ರತಿದಿನ ನಿರಂತರವಾಗಿ ವಿದ್ಯಾಭ್ಯಾಸದಲ್ಲಿ ತೊಡಗಬೇಕು.

ಸರ್ಕಾರಿ ಹುದ್ದೆ ಪಡೆಯಲು ವಿದ್ಯಾರ್ಥಿಗಳು ಈ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾದರೆ ಮಾತ್ರ ಅವಕಾಶ ಇದೆ. ಯಾವಾಗ ವಿದ್ಯೆಯನ್ನು ಉದ್ಯೋಗ ಪಡೆಯಲು ಕಲಿಯುತ್ತಿದ್ದಾರೋ ಅಂದಿನಿಂದ ಅವರ ಗುರಿ ಹಾಗೂ ಮೌಲ್ಯಗಳು ಬೆಳೆಯುತ್ತದೆ. ಯಾವದೇ ಕ್ಷೇತ್ರದಲ್ಲಿ ಗುರಿ ಸಾಧಿಸಲು ವಿದ್ಯೆ ಅನಿವಾರ್ಯವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಇತ್ತೀಚೆಗೆ ಕೇವಲ ವಿದ್ಯೆಯನ್ನು ಗಳಿಸಿದರೆ ಸಾಲದು ಅದಕ್ಕೆ ತರಬೇತಿಯೂ ಬೇಕು. ಏಕೆಂದರೆ ವಿದ್ಯೆ ಜ್ಞಾನವನ್ನು ಕೊಟ್ಟರೆ ತರಬೇತಿ ಪರಿಣಿತಿಯನ್ನು ನೀಡುತ್ತದೆ. ವಿದ್ಯೆಯಿಂದ ಸಾಹಿತ್ಯ ಪಡೆಯಬಹುದಾಗಿದೆ. ವಿದ್ಯೆಯ ಮತ್ತೊಂದು ಮುಖ್ಯ ಲಕ್ಷಣವೆಂದರೆ ನಡತೆಯನ್ನೇ ರೂಪಿಸುವುದು.

ಹಾಗೇ ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸುತ್ತಿರುವ ಸ್ಪರ್ಧಾರ್ಥಿಗಳು ಉತ್ತೀರ್ಣ ಅಥವಾ ಅನುತ್ತೀರ್ಣರಾದರೆಂದು ಆತ್ಮವಿಶ್ವಾಸ ಕಳೆದುಕೊಳ್ಳದೆ, ಸತತ ಪ್ರಯತ್ನವೇ ಸಾಧನೆಯ ಮೊದಲ ಮೆಟ್ಟಿಲು ಎನ್ನುವಂತೆ ಸದಾ ಪ್ರಯತ್ನಿಸಬೇಕು. ಹಾಗೇ ಕಳೆದ ಸಮಯ ಕೋಟಿ ಕೊಟ್ಟರೂ ಬಾರದು. ಸಿಕ್ಕ ಅವಕಾಶವನ್ನು ಬಳಸಿಕೊಂಡು ಪ್ರತಿದಿನ ನಮಗೆ ದಿನದ ಕೆಲಸ ಕಾರ್ಯ ಮಾಡಲು ಸಿಕ್ಕ ಅವಕಾಶ ಮತ್ತು ಅದರ ಪ್ರತಿ ನಿಮಿಷವನ್ನು ಸಾರ್ಥಕ ಕೆಲಸದ ಮೂಲಕ ಸದ್ವಿನಿಯೋಗ ಮಾಡಿ ಕೊಳ್ಳೋಣ.




**– ಮಾಳೇಶ ಮಾದರ.**
**ಸಮೂಹ ಸಂವಹನ–ಪತ್ರಿಕೋದ್ಯಮ ವಿಭಾಗ,**
**ಕವಿವಿ, ಧಾರವಾಡ.**

# ನಿವೃತ್ತ ನೌಕರರ ಸಂಘದ ವಾರ್ಷಿಕೋತ್ಸವ ಜ. 12ಕ್ಕೆ

**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ನರೇಗಲ್ಲ ನಿವೃತ್ತ ನೌಕರರ ಸಂಘ ಹಾಗೂ ಹಿರಿಯರ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕೋತ್ಸವವು ಜನೇವರಿ 12ರ ಬೆಳಿಗ್ಗೆ 10.30ಕ್ಕೆ ಪಟ್ಟಣದ ಹಿರೇಮಠದ ಸಭಾಭವನದಲ್ಲಿ ಜರುಗಲಿದೆ ಎಂದು ಸಂಘದ ಅಧ್ಯಕ್ಷ ದೊಡ್ಡಯ್ಯ ಅರವಟಗಿಮಠ ತಿಳಿಸಿದರು.

ಪಟ್ಟಣದ ಶ್ರೀ ರೇಣುಕಾಚಾರ್ಯ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ಸಂಘದ ಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಕಳೆದ ಹತ್ತು ವರ್ಷಗಳಿಂದ ನಿವೃತ್ತ ನೌಕರರ ಮತ್ತು ಹಿರಿಯರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕ್ರಮಗಳು ನಡೆಯುತ್ತ ಬಂದಿದ್ದು, ದಶಮಾನದ ಹೊಸ್ತಿಲಿಲ್ಲಿರುವ ಸಂಘಕ್ಕೆ ಅನೇಕ ಅಧ್ಯಕ್ಷರುಗಳ ದೊಡ್ಡ ಕೊಡುಗೆಯಿದೆ. ಅಂದಿನ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಷ.ಬ್ರ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳವರು ವಹಿಸಬೇಕೆಂಬುದು ಎಲ್ಲರ ಆಸೆಯಾಗಿದೆ.

ಹಾಗೆಯೆ ವಿಶೇಷ ಉಪನ್ಯಾಸಕರನ್ನಾಗಿ ಗದಗ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಕೆ.ಎ. ಬಳಿಗೇರ ಅವರನ್ನು ಆಮಂತ್ರಿಸುವ ವಿಚಾರವಿದೆ. ಅಂದಿನ ಸಮಾರಂಭದಲ್ಲಿ ಜಿಲ್ಲಾ ನಿವೃತ್ತ ಸಂಘದ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ಸಭೆಯನ್ನುದ್ದೇಶಿಸಿ ನಿಕಟಪೂರ್ವ ಅಧ್ಯಕ್ಷ ಡಾ. ಆರ್.ಕೆ. ಗಚ್ಚಿನಮಠ, ನಿವೃತ್ತ ಶಿಕ್ಷಕ ಎಂ.ಎ. ಹಿರೆವಡೆಯರ, ನಿವೃತ್ತ ಮುಖ್ಯ ಶಿಕ್ಷಕ ಸಿ.ವಿ. ವಂಕಲಕುಂಟಿ, ನಿವೃತ್ತ ಶಿಕ್ಷಕ ಸಿ.ಎಂ. ಕುಲಕರ್ಣಿ ವಾರ್ಷಿಕೋತ್ಸವದ ಯಶಸ್ಸಿಗೆ ಸಲಹೆ–ಸೂಚನೆಗಳನ್ನು ನೀಡಿದರು.

ಸಭೆಯಲ್ಲಿ ಚಂದ್ರಾಮ ಗ್ರಾಮಪುರೋಹಿತ, ಕೆ.ಕೆ. ದಾಸರ, ಎಸ್.ಆರ್. ಬಾಗಲಿ, ಎಸ್.ಬಿ. ಹೊಸಮನಿ, ಎಸ್.ಕೆ. ಪಾಟೀಲ, ಕೆ.ಎಸ್. ಕಳಕೊಣ್ಣವರ, ಎಸ್.ಬಿ. ಹಿರೇಮಠ, ಎನ್.ಎಚ್. ಚಿಕ್ಕನಗೌಡರ, ವೀರಪ್ಪ ಕುಂಬಾರ, ವಿ.ಎಸ್. ಕೊಟಗಿ, ವಿ.ಬಿ. ಹಕ್ಕಿ, ಬಿ.ಎಸ್. ಉಪ್ಪಿನ ಸೇರಿದಂತೆ ಇತರರಿದ್ದರು. ಬಿ.ಎ. ಕಲಾಲಬಂಡಿ ಸ್ವಾಗತಿಸಿದರು, ವೀರಭದ್ರಪ್ಪ ಕೆರಿಯವರ ನಿರೂಪಿಸಿದರು. ಶಿವಯೋಗಿ ಜಕ್ಕಲಿ ವಂದಿಸಿದರು.

# ಕುವೆಂಪು ಅಜರಾಮರ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ರಸಋಷಿ ಕುವೆಂಪು ಅವರು ಮಾನವ ಕುಲಕ್ಕೆ ನೀಡಿದ ಮಾರ್ಗದರ್ಶನ ಮತ್ತು ಆದರ್ಶಗಳು ಸಾರ್ವಕಾಲಿಕ. ಕನ್ನಡಕ್ಕೆ ಹೊಸ ನುಡಿಗಟ್ಟು ಹಾಗೂ ಹೊಸ ಕಲ್ಪನೆಗಳನ್ನಿತ್ತು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಮತ್ತು ಆ ಮೂಲಕ ವಿಶ್ವಮಾನವ ಸಂದೇಶ ನೀಡಿದ ಕುವೆಂಪು ಅಜರಾಮರ ಎಂದು ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಬಸವರಾಜ ಯರಗುಪ್ಪಿ ಅಭಿಪ್ರಾಯಪಟ್ಟರು.

ಇಲ್ಲಿನ ಸರ್ಕಾರಿ ಮಾದರಿ ಹೆಣ್ಣು ಮಕ್ಕಳ ಶಾಲೆಯಲ್ಲಿ ರಾಷ್ಟ್ರಕವಿ ಕುವೆಂಪು ಅವರ 120ನೇ ಜನ್ಮದಿನದ ಸವಿನೆನಪಿಗಾಗಿ ಹಮ್ಮಿಕೊಂಡಿದ್ದ ವಿಶ್ವ ಮಾನವ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಹುಟ್ಟುವಾಗ ವಿಶ್ವಮಾನವನಾಗಿಯೇ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಜಾತಿ, ಮತ, ಜನಾಂಗ, ವರ್ಣ ಇತ್ಯಾದಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಪ್ರಪಂಚದ ಮಕ್ಕಳೆಲ್ಲ 'ಅನಿಕೇತನ'ರಾಗಬೇಕು ಎಂದು ಕುವೆಂಪು ಅವರು ಹೇಳಿದ್ದು ಅಕ್ಷರಶಃ ಸತ್ಯವಾದ ಮಾತು ಎಂದರು.

ದಕ್ಷಿಣ ಕ್ಲಸ್ಟರ್‌ನ ಸಂಪನ್ಮೂಲ ವ್ಯಕ್ತಿ ಸತೀಶ ಬೋಮಲೆ ಮಾತನಾಡಿ, ಕುವೆಂಪು ಅವರು ರಚಿಸಿದ ನಾಡಗೀತೆಯನ್ನು ಶಾಲಾ ಅವಧಿಯ ಪ್ರಾರ್ಥನಾ ಸಮಯದಲ್ಲಿ ಹಾಡಿ ಅವರನ್ನು ಪ್ರತಿದಿನ ಸ್ಮರಿಸಲಾಗುತ್ತದೆ. ಕನ್ನಡ ಸಾಹಿತ್ಯಕ್ಕೆ ನೀಡಿದ ಅಮೂಲ್ಯ ಕೊಡುಗೆ ಹಾಗೂ ಪರಿಸರ ಸಂರಕ್ಷಣೆಯ ಮಹತ್ವವನ್ನು ಕುವೆಂಪು ಅವರ ಕವಿತೆಗಳು ಎತ್ತಿ ತೋರಿಸುತ್ತವೆ. ಅವರ ಜನ್ಮ ದಿನಾಚರಣೆಯನ್ನು ರಾಜ್ಯ ಸರ್ಕಾರವು 2015ರಿಂದ ವಿಶ್ವ ಮಾನವ ದಿನಾಚರಣೆಯನ್ನಾಗಿ ಆಚರಿಸಲು ನಿರ್ಧರಿಸಿದೆ ಎಂದು ಹೇಳಿದರು.

ಮುಖ್ಯೋಪಾಧ್ಯಯ ಬಿ.ಎಂ. ಕುಂಬಾರ ಕುವೆಂಪುರವರ ಕುರಿತು ಮಾತನಾಡಿದರು. ಶಿಕ್ಷಕರಾದ ಎಚ್.ಡಿ. ನಿಂಗರಡ್ಡಿ, ಆರ್.ಎಮ್. ಶಿರಹಟ್ಟಿ, ಆರ್.ಕೆ. ಉಪನಾಳ, ಅಕ್ಷತಾ ಕಾಟೆಗಾರ, ಎನ್‌ಟಿಸಿ ಪ್ರಶಿಕ್ಷಣಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.



ಗದಗ-ಬೆಟಗೇರಿ ನಗರಸಭೆಯ ವಾರ್ಡ್ ನಂಬರ್ 3ರಲ್ಲಿ ಬಿಜೆಪಿ ಗದಗ ಜಿಲ್ಲೆ ಪ್ರಕೋಷ್ಠಗಳ ಸಹ ಸಂಯೋಜಕ ರಮೇಶ್ ಸಜ್ಜಗಾರ್ ನೇತೃತ್ವದಲ್ಲಿ ಬೂತ್ ಕಮಿಟಿ ರಚನೆ ಮಾಡಲಾಯಿತು. ಈ ಸಂದರ್ಭದಲ್ಲಿ ನಗರಸಭೆ ಸದಸ್ಯರು, ಮಾಧುಸಾ ಮೆರವಾಡೆ, ಬೂತ್ ಅಧ್ಯಕ್ಷರು, ಪಕ್ಷದ ಹಿರಿಯರು ಉಪಸ್ಥಿತರಿದ್ದರು.

## ಸೆಂಟ್ರಲ್ ಕೈವ್ ಮೇಲೆ ರಷ್ಯಾ ಡ್ರೋನ್ ದಾಳಿಯಿಂದ ಇಬ್ಬರು ಸಾವು; ಹಲವರಿಗೆ ಗಾಯ

**■ವಿಜಯಸಾಕ್ಷಿ ಸುದ್ದಿ, ರಷ್ಯಾ**

ರಷ್ಯಾ 2025 ರ ಮೊದಲ ದಿನ ಉಕ್ರೇನ್‌ನ ಕೈವ್ ಕೇಂದ್ರದ ಮೇಲೆ ವೈಮಾನಿಕ ದಾಳಿಯನ್ನು ಪ್ರಾರಂಭಿಸಿದೆ. ದಾಳಿಯಲ್ಲಿ ಇಬ್ಬರು ಸಾವನ್ನಪ್ಪಿದ್ದು ಹಲವರಿಗೆ ಗಂಭೀರ ಗಾಯಗಾಳಾಗಿವೆ ಎಂದು ಅಂತಾರಾಷ್ಟ್ರೀಯ ಮಾಧ್ಯಮಗಳು ವರದಿ ಮಾಡಿವೆ.

ಉಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರು ಹೊಸ ವರ್ಷದ ಸಂದೇಶದಲ್ಲಿ, 'ಮುಂದಿನ 12 ತಿಂಗಳುಗಳಲ್ಲಿ ಯುದ್ಧವನ್ನು ಅಂತ್ಯಗೊಳಿಸಲು ಸಾಧ್ಯವಿರುವ ಎಲ್ಲವನ್ನೂ ಮಾಡುವುದಾಗಿ' ಪ್ರತಿಜ್ಞೆ ಮಾಡಿದ ಕೆಲವೇ ಗಂಟೆಗಳ ನಂತರ ಈ ದಾಳಿ ಸಂಭವಿಸಿದೆ.

ರಷ್ಯಾದ ಡ್ರೋನ್‌ಗಳನ್ನು ರಾಜಧಾನಿಯತ್ತ ಹಾರಿಸಿದ ನಂತರ ಇಬ್ಬರು ಸತ್ತರು, ಆರು ಮಂದಿ ಗಾಯಗೊಂಡರು ಮತ್ತು ನಾಲ್ವರು ಅವಶೇಷಗಳಿಂದ ಹೊರತೆಗೆಯಲಾಗಿದೆ ಎಂದು ಉಕ್ರೇನ್‌ನ ರಾಜ್ಯ ತುರ್ತು ಸೇವೆಗಳು ತಿಳಿಸಿವೆ. ನಗರದಲ್ಲಿ ಎಎಫ್‌ಪಿ ಪತ್ರಕರ್ತರು ಬುಧವಾರ ಮುಂಜಾನೆ ಬಹು ಶಕ್ತಿಯುತ ಸ್ಫೋಟಗಳನ್ನು ಕೇಳಿದ್ದಾಗಿ ವರದಿ ಮಾಡಿದ್ದಾರೆ. ರಷ್ಯಾದ ಡ್ರೋನ್‌ಗಳು ರಾಜಧಾನಿಯ ಪೆಚೆರ್ಸ್ಕಿ ಜಿಲ್ಲೆಯನ್ನು ಗುರಿಯಾಗಿಸಿಕೊಂಡಿವೆ ಎಂದು ಉಕ್ರೇನಿಯನ್ ಅಧಿಕಾರಿಗಳು ತಿಳಿಸಿದ್ದಾರೆ. ಇವು ಅಧ್ಯಕ್ಷರ ಅರಮನೆ ಮತ್ತು ಸರ್ಕಾರಿ ಕ್ವಾರ್ಟರ್‌ನ ನೆಲೆಯಾಗಿದೆ. ದಾಳಿಯಿಂದ ಅಪಾರ್ಟ್‌ಮೆಂಟ್ ಬ್ಲಾಕ್‌ಗಳು ಹಾನಿಯಾಗಿವೆ. ಉಕ್ರೇನ್‌ನ ಸೆಂಟ್ರಲ್ ಬ್ಯಾಂಕ್ ಸಿಟಿ ಸೆಂಟರ್‌ನಲ್ಲಿರುವ ಅದರ ಒಂದು ಕಟ್ಟಡವು ದಾಳಿಯಲ್ಲಿ ಜಖಂಗೊಂಡಿದೆ ಎಂದು ಹೇಳಿದರು. ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಇತ್ತೀಚಿನ ವಾರಗಳಲ್ಲಿ ಕೈವ್‌ನ ಹೃದಯಭಾಗದಲ್ಲಿ ಹೊಡೆಯುವುದಾಗಿ ಪದೇಪದೆ ಬೆದರಿಕೆ ಹಾಕಿದ್ದಾರೆ. ರಷ್ಯಾದ ಭೂಪ್ರದೇಶದ ಮೇಲೆ ಉಕ್ರೇನ್ ಯುಎಸ್ ಸರಬರಾಜು ಮಾಡಿದ ಶಸ್ತ್ರಾಸ್ತ್ರಗಳನ್ನು ಹಾರಿಸುವುದಕ್ಕೆ ಪ್ರತಿಕ್ರಿಯೆಯಾಗಿದೆ ಎಂದು ಅವರು ಹೇಳಿದರು.

### ಜಾಗತಿಕ ಧಾರ್ಮಿಕ ವೈವಿಧ್ಯತೆ, ಶಾಂತಿಯ ಕುರಿತು ವಿಶೇಷ ಉಪನ್ಯಾಸ

# ಮೋಕ್ಷ ಸಾಧನೆಗೆ ಧರ್ಮ ಒಂದು ಮಾರ್ಗ

**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಜಗತ್ತಿನಲ್ಲಿ ಎಲ್ಲರೂ ಧರ್ಮದಿಂದ ಬದುಕಬೇಕೆಂದು ಹೇಳುತ್ತಾರೆ. ಆದರೆ ಧರ್ಮವೆಂದರೆ ಏನೆಂಬುದನ್ನು ಅರ್ಥೈಸಲು ಇಂದಿಗೂ ಯಾರಿಂದಲೂ ಸಾಧ್ಯವಾಗಿಲ್ಲ. ಧರ್ಮವು ಮೋಕ್ಷ ಸಾಧನೆಗೆ ಒಂದು ಮಾರ್ಗವಾಗಿದೆ ಎಂದು ಗದಗ ಜಿಲ್ಲಾ ಉಪನ್ಯಾಸಕರ ಸಂಘದ ಅಧ್ಯಕ್ಷ ಎಸ್.ಎಸ್. ಸೋಮಣ್ಣವರ ಹೇಳಿದರು.

ಪಟ್ಟಣದ ಕೋಡಿಕೊಪ್ಪದಲ್ಲಿನ ಶ್ರೀ ಅನ್ನದಾನೇಶ್ವರ ಮಂಟಪದಲ್ಲಿ ಎಸ್‌ಎವಿವಿಪಿ ಸಮಿತಿ ನರೇಗಲ್ಲ ಮತ್ತು ಅಕ್ಷರ ಭಾರತ ಪ್ರತಿಷ್ಠಾನ ಗದಗ ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಶಿವಾನುಭವಗೋಷ್ಠಿ-57ರಲ್ಲಿ ಅವರು ಜಾಗತಿಕ ಧಾರ್ಮಿಕ ವೈವಿಧ್ಯತೆಗಳು ಮತ್ತು ಶಾಂತಿ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಜಗತ್ತಿನಲ್ಲಿ 10 ಸಾವಿರಕ್ಕೂ ಮಿಕ್ಕಿ ಧರ್ಮಗಳಿವೆ. ಅದರಲ್ಲಿ ಕೆಲವು ಚಾಲ್ತಿಯಲ್ಲಿದ್ದರೆ ಮತ್ತೆ ಕೆಲವು ನಶಿಸಿ ಹೋಗಿವೆ. ಜಗತ್ತಿನ ಪ್ರತಿ ಮನುಷ್ಯನೂ ಒಂದಿಲ್ಲ ಒಂದು ಧರ್ಮಕ್ಕೆ ಅಂಟಿಕೊಂಡಿದ್ದಾನೆ. ಜಗತ್ತಿನ ಬಹುತೇಕ ಧರ್ಮಗಳು ಹುಟ್ಟಿಕೊಂಡಿದ್ದು ಏಶಿಯಾ ಖಂಡದಲ್ಲಿ. ಎಲ್ಲ ಧರ್ಮಗಳೂ ಶಾಂತಿ, ಸಹನೆಯ ಜೀವನವನ್ನೆ ಬಯಸುತ್ತವೆ ಮತ್ತು ಬೋಧಿಸುತ್ತವೆ. ಆದರೆ ಅವುಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದ ಮನುಷ್ಯ ಸಲ್ಲದ ರಗಳೆಗಳನ್ನು ಮಾಡಿಕೊಂಡು ಗೋಳಾಡುತ್ತಿದ್ದಾನೆ ಎಂದರು.



ಅಧ್ಯಕ್ಷತೆ ವಹಿಸಿದ್ದ ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ ಧರ್ಮದ ಮತ್ತಷ್ಟು ಆಯಾಮಗಳನ್ನು ಸಭೆಗೆ ಪರಿಚಯಿಸಿದರು. ಸಂಸ್ಥೆಯ ಆಡಳಿತಾಧಿಕಾರಿ ಎನ್.ಆರ್. ಗೌಡರ ವೇದಿಕೆಯ ಮೇಲಿದ್ದರು. ಶಿವಾನುಭವಗೋಷ್ಠಿಯಲ್ಲಿ ಉಪನ್ಯಾಸಕ ಹಾದಿಮನಿ, ನಿವೃತ್ತ ಶಿಕ್ಷಕ ಎಂ.ಎ. ಹಿರೆವಡೆಯರ, ಹಾಸ್ಟೆಲ್ ಚೇರಮನ್ ಮೈಲಾರಪ್ಪ ಮೆಣಸಿಗಿ ಸೇರಿದಂತೆ ಇನ್ನೂ ಅನೇಕರಿದ್ದರು.

ಪ್ರಾಚಾರ್ಯ ವೈ.ಸಿ. ಪಾಟೀಲ ಸ್ವಾಗತಿಸಿದರು. ಮುಖ್ಯ ಶಿಕ್ಷಕ ಎಸ್.ಎನ್. ಹೂಲಗೇರಿ ಅತಿಥಿಗಳನ್ನು ಪರಿಚಯಿಸಿದರು. ಉಪನ್ಯಾಸಕ ಮುತ್ತಣ್ಣ ಹೊನವಾಡ ನಿರೂಪಿಸಿದರು. ಡಾ. ಕಲ್ಲಯ್ಯ ಹಿರೇಮಠ ವಂದಿಸಿದರು.

ಜಗತ್ತಿನ ಎಲ್ಲ ಚರಾಚರ ವಸ್ತುಗಳಲ್ಲಿಯೂ ದೇವರನ್ನು ಕಾಣುವುದು ಭಾರತೀಯ ಸಂಸ್ಕೃತಿ. ಭಾರತೀಯರು ಬಹು ದೇವತಾರಾಧನೆಯನ್ನು ಅಳವಡಿಸಿಕೊಂಡಿದ್ದಾರೆ. ಇದೇ ತತ್ವವನ್ನು ಜಗತ್ತಿನ ಬಹುತೇಕ ದೇಶಗಳು ಅಳವಡಿಸಿಕೊಂಡಿವೆ. ನಂತರದಲ್ಲಿ ಏಕ ದೇವತೋಪಾಸನೆ ಜಾರಿಯಲ್ಲಿ ಬಂತು. ಜಾತಿ, ಮತ, ಪಂಥಗಳನ್ನು ಮೀರಿ ಇರುವುದೇ ಧರ್ಮ. ಧರ್ಮದ ಅರ್ಥ ಬಹಳಷ್ಟು ವಿಸ್ತಾರವಾಗಿದ್ದು, ಅದನ್ನು ಅರಿಯುವುದು ಕಷ್ಟದ ಕೆಲಸ ಎಂದು ಎಸ್.ಎಸ್. ಸೋಮಣ್ಣವರ ಅಭಿಪ್ರಾಯಪಟ್ಟರು.



ಗದಗ ನಗರದ ಕೆ.ಎಲ್.ಇ. ಸಂಸ್ಥೆಯ ಪೂರ್ವ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮದಲ್ಲಿ ಯುಕೆಜಿ ವಿದ್ಯಾರ್ಥಿ ವಿಲೋಕ ಸುತ್ತೂರಮಠ ಕಾಂತಾರ ಚಿತ್ರದ ದೈವದ ವೇಷಭೂಷಣದಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಜನರ ಮೆಚ್ಚುಗೆಗೆ ಪಾತ್ರನಾದನು. ಶಾಲೆಯ ಮುಖ್ಯ ಶಿಕ್ಷಕಿ ಕಲ್ಪನಾ ಚಚಡಿ, ಎಲ್ಲ ಶಿಕ್ಷಕ ವೃಂದವರು ಹಾಗೂ ಶಾಲೆಯ ಆಡಳಿತ ಮಂಡಳಿಯವರು ಅಭಿನಂದಿಸಿದ್ದಾರೆ.

### ಅಕ್ಕನ ಬಳಗದಲ್ಲಿ ನಡೆದ ಮಾಸಿಕ ಕಾರ್ಯಕ್ರಮದಲ್ಲಿ ತೋಂ. ಸಿದ್ಧರಾಮ ಶ್ರೀಗಳು

# ಶ್ರೀ ಮಠಕ್ಕೂ ಕೋಟಿ ಮನೆತನಕ್ಕೂ ಅವಿನಾಭವ ಸಂಬಂಧ

**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಎಲ್ಲಾ ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ಗಂಗಣ್ಣ ಕೋಟಿಯವರು ತಮ್ಮ ಸಕ್ರಿಯವಾದ ಸೇವೆಯನ್ನು ಸಲ್ಲಿಸುತ್ತಿದ್ದರು. ತೋಂಟದಾರ್ಯ ಮಠದ ಇತಿಹಾಸವನ್ನು ಬರೆದವರೇ ಕೋಟಿ ಮನೆತನದವರು. ತೋಂಟದಾರ್ಯ ಮಠಕ್ಕೂ, ಕೋಟಿ ಮನೆತನಕ್ಕೂ ಅವಿನಾಭವ ಸಂಬಂಧ ಇದೆ. ಗಂಗಣ್ಣ ಕೋಟಿಯವರು ಮನೆಗೆ ಮಲ್ಲಿಗೆಯಾಗಿ ಸಮಾಜಕ್ಕೆ ಉಪಕಾರಿಯಾಗಿ ಬಾಳಿದವರು ಎಂದು ತೋಂಟದಾರ್ಯ ಸಂಸ್ಥಾನಮಠದ ಶ್ರೀ ಮ.ನಿ.ಪ್ರ. ಜಗದ್ಗುರು ಡಾ. ಸಿದ್ಧರಾಮ ಮಹಾಸ್ವಾಮಿಗಳು ನುಡಿದರು.

ಅಕ್ಕನ ಬಳಗದಲ್ಲಿ ನಡೆದ ಮಾಸಿಕ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀಗಳು ಗಂಗಣ್ಣ ಕೋಟಿಯವರ ಕುರಿತು ಅಭಿಮಾನದ ಆಶೀರ್ವಚನ ನೀಡಿದರು.

ಅತಿಥಿ ಉಪನ್ಯಾಸಕರಾಗಿ ಆಗಮಿಸಿದ ಡಾ. ಎಸ್.ಬಿ. ಶೆಟ್ಟರ ಮಾತನಾಡುತ್ತ, ಗಂಗಣ್ಣ ಕೋಟಿ ಅವರದು ತ್ಯಾಗಮಯ ಜೀವನ. ಚಿಕ್ಕಂದಿನಲ್ಲಿ ಕಷ್ಟದ ದಿನಗಳನ್ನು ಎದುರಿಸಿದ ಅವರು ಹೋರಾಟದ ವ್ಯಕ್ತಿತ್ವವನ್ನು ಬೆಳೆಸಿಕೊಂಡವರು. ತಮ್ಮ ಜೀವನವನ್ನೇ ಕುಟುಂಬಕ್ಕಾಗಿ, ಸಮಾಜಕ್ಕಾಗಿ ಸಮರ್ಪಿಸಿಕೊಂಡವರು. ಅವರು ಸಮಾಜಕ್ಕೆ ನೀಡುತ್ತಾ, ಕೊಟ್ಟಿದ್ದನ್ನು



ಮರೆತರು. ನ್ಯಾಯ ನಿಷ್ಠುರವಾದ ನಿಷ್ಕಾಮ ಕರ್ಮಯೋಗಿಗಳಾಗಿದ್ದರು. ತುಂಬು ಕುಟುಂಬದಲ್ಲಿ ಇಬ್ಬರು ದಂಪತಿಗಳು, ತಮ್ಮ ಜೀವನವನ್ನು ಕಳೆದರು. ಮಕ್ಕಳಿಲ್ಲದಿದ್ದರೂ ಇರುವವರೆನೆಲ್ಲ ತಮ್ಮ ಮಕ್ಕಳೆಂದು ತಿಳಿದು ಬಾಳಿದವರು. ಈಗಿನ ಕಾಲದ ಮಕ್ಕಳನ್ನು ಚಿಕ್ಕಂದಿನಲ್ಲಿ ದೂರ ಇಟ್ಟು ವಿದ್ಯಾಭ್ಯಾಸ ಕಲಿಸಿ, ಜೀವನ ನಿರ್ವಹಣೆಗೆಂದು ಮಕ್ಕಳು ವಿದೇಶಕ್ಕೆ ಹೋದಾಗ, ಪರದೇಶಿಗಳಾಗಿ ಬಾಳುವವರ ಸಂಖ್ಯೆಯೇ ಹೆಚ್ಚು ಎಂದರು.

ಅಧ್ಯಕ್ಷರಾದ ಲಲಿತಾ ವಿ.ಬಾಳಿಹಳ್ಳಿಮಠ ಸ್ವಾಗತಿಸಿದರು. ರಾಜೇಶ್ವರ ಶೆಟ್ಟರ್, ಪಾರ್ವತಿ ಮಾಳೆಕೊಪ್ಪಮಠ ಪ್ರಾರ್ಥಿಸಿದರು. ಅನುಪಮಾ ಜೋಳದ ನಿರೂಪಿಸಿದರು. ವೇದಿಕೆಯ ಮೇಲೆ ಸುಶೀಲಾ ಕೋಟಿ, ಅನ್ನಪೂರ್ಣ ಮಾಳೆಕೊಪ್ಪಮಠ ಉಪಸ್ಥಿತರಿದ್ದರು. ಶಾರದಾ ಹಿರೇಮಠ, ವೀಣಾ ಕೋಟಿ, ಸುರೇಖಾ ಪಿಳ್ಳಿ ಅಭಿಪ್ರಾಯ ಹಂಚಿಕೊಂಡರು. ಕಾರ್ಯಕ್ರಮದ ರೂವಾರಿಗಳಾದ ಸುಶೀಲ ಕೋಟಿ ಅವರು ಪ್ರಸಾದದ ಸೇವೆಯನ್ನು ವಹಿಸಿಕೊಂಡಿದ್ದರು. ಜಯಲಕ್ಷ್ಮೀ ಬಳ್ಳಾರಿ ಕಾರ್ಯಕ್ರಮ ಸಂಯೋಜಿಸಿದರು. ರೇಣುಕಾ ಎಲ್.ಅಮಾತ್ಯ ವಂದಿಸಿದರು.

> ಗಂಗಣ್ಣ ಕೋಟಿ ಹಾಗೂ ಸುಶೀಲಮ್ಮ ಕೋಟಿ ಅವರದು ಅನ್ಯೋನ್ಯ ದಾಂಪತ್ಯ. ಅಕ್ಕನ ಬಳಗದಲ್ಲಿ ಅವರೀರ್ವರ ಭಾವಚಿತ್ರವನ್ನು ಅನಾವರಣ ಮಾಡಿರುವುದು ಅತ್ಯಂತ ಶ್ಲಾಘನೀಯವಾದದ್ದು. ಅಕ್ಕನ ಬಳಗದಲ್ಲಿ ಅರ್ಥಪೂರ್ಣವಾದ ಕಾರ್ಯಕ್ರಮಗಳನ್ನು ಮಾಡುತ್ತಾ ಬರುತ್ತಿರುವಿರಿ. ಸಾಕಷ್ಟು ಜನ ಹೊಸದಾಗಿ ಸದಸ್ಯತ್ವವನ್ನು ಪಡೆದಿದ್ದಾರೆ. ಹಳೆ ಬೇರು, ಹೊಸ ಚಿಗುರು ಇರಲು ಮರ ಸೊಬಗು ಎಂಬಂತೆ ಹಿರಿಯ ಸದಸ್ಯರು ಗಟ್ಟಿ ಬೇರಾಗಿ ಉಳಿಯುತ್ತಾರೆ. ಹೊಸದಾಗಿ ಬಂದವರು ನಳ ನಳಿಸುವ ಹಸಿರು ರಂಬೆ-ಕೊಂಬೆಗಳಾಗಿರುತ್ತಾರೆ ಎಂದು ಶ್ರೀಗಳು ಹೇಳಿದರು.

# ದುಶ್ಚಟ ಮುಕ್ತ ಜೀವನದಿಂದ ನೆಮ್ಮದಿ

**■ವಿಜಯಸಾಕ್ಷಿ ಸುದ್ದಿ, ಮುಳಗುಂದ**

ದುಶ್ಚಟಗಳು ಮನುಷ್ಯನನ್ನು ಸಾಮಾಜಿಕ ಕಳಂಕಕ್ಕೆ ಗುರಿ ಮಾಡುತ್ತವೆ. ಶ್ರಮಿಕ ವರ್ಗದವರು ಎಲ್ಲಾ ತರಹದ ಚಟಗಳನ್ನು ತ್ಯಜಿಸಿ ಸುಖೀ ಜೀವನ ನಡೆಸಬೇಕು ಎಂದು ಡಾ. ಎಸ್.ಸಿ. ಚವಡಿ ಹೇಳಿದರು.

ಅವರು ಪಟ್ಟಣದ ರೇಣುಕಾ ಯಲ್ಲಮ್ಮ ದೇವಸ್ಥಾನದಲ್ಲಿ ಪತಂಜಲಿ ಯೋಗ ಸಮಿತಿ ವತಿಯಿಂದ 'ಬೇಡ ಮದ್ಯಪಾನ ಮಾಡು ಯೋಗ-ಧ್ಯಾನ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂದು ಆರೋಗ್ಯ ಸಂಪತ್ತಿನ ಮುಂದೆ ಎಲ್ಲಾ ಸಂಪತ್ತುಗಳು ನಶ್ವರವಾಗಿದ್ದು, ಆಹಾರ ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆಯಿಂದ ಇಂದು



ಅನೇಕ ರೋಗ ರುಜಿನುಗಳಿಗೆ ತುತ್ತಾಗುತ್ತಿದ್ದೇವೆ. ದುಶ್ಚಟಗಳಾದ ಮದ್ಯಪಾನ, ಸಿಗರೇಟು, ತಂಬಾಕು, ಗುಟುಕಾ ಸೇವನೆಯಿಂದ ನಮ್ಮ ಆರೋಗ್ಯ ಹಾಳಾಗುತ್ತಿದೆ. ನಿತ್ಯ ಯೋಗ-ಧ್ಯಾನ ಮಾಡುವುದರಿಂದ ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಲು ಸಾಧ್ಯವಾಗುತ್ತದೆ ಎಂದರು.

ಪ.ಪಂ ಸದಸ್ಯ ಎಸ್.ಸಿ. ಬಡ್ನಿ ಮಾತನಾಡಿ, ಆರೋಗ್ಯ ಕಾಪಾಡಿಕೊಳ್ಳುವುದು ನಮ್ಮ ಕೈಯಲ್ಲಿದೆ. ಮಕ್ಕಳು ಹಾನಿಕಾರಕ ಪದಾರ್ಥಗಳನ್ನು ನಿತ್ಯ ಸಾಕಷ್ಟು ಸೇವನೆ ಮಾಡುತ್ತಿದ್ದಾರೆ. ಇದರಿಂದ ಮಕ್ಕಳ ಆರೋಗ್ಯ ಹಡಗೆಡುತ್ತಿದ್ದು, ಮಕ್ಕಳು ಮನೆಯಲ್ಲಿನ ಆಹಾರ ಪದ್ಧತಿ ರೂಢಿಸಿಕೊಳ್ಳಬೇಕು. ಪೌಷ್ಠಿಕಯುಕ್ತ ಆಹಾರ ಸೇವನೆ ಮಾಡಿ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಬೇಕು ಎಂದರು.

ಅನೂಪ ಕೆಂಚನಗೌಡರ, ಚೆನ್ನಪ್ಪ ಕುಲಕರ್ಣಿ, ಅಕ್ಕಮ್ಮಾ ನೀಲಗುಂದ, ನಾಗವೇಣಿ, ಯೋಗ ಶಿಕ್ಷಕ ಪ್ರಕಾಶ ಮದ್ದಿನ ಇದ್ದರು.

# ರಂಭಾಪುರಿ ಶ್ರೀಗಳ 69ನೇ ಜನ್ಮ ದಿನೋತ್ಸವ ಜ.7ಕ್ಕೆ



**■ವಿಜಯಸಾಕ್ಷಿ ಸುದ್ದಿ, ಬಾಳೆಹೊನ್ನೂರು**

ತೆಲಂಗಾಣ ರಾಜ್ಯದ ಯಾದಾದ್ರಿ ಭುವನಗಿರಿ ಜಿಲ್ಲೆ ಅಲೇರುಮಂಡಲ ಕೊಲನುಪಾಕ ಶ್ರೀ ಚಂಡಿಕಾಂಬಾ ಸಮೇತ ಸ್ವಯಂಭೂ ಶ್ರೀ ಸೋಮೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಜನವರಿ 7ರಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳವರ 69ನೇ ಜನ್ಮ ದಿನೋತ್ಸವ ಹಾಗೂ ವೀರಶೈವ ಸಂಸ್ಕೃತಿ ಸಂವರ್ಧನಾ ಸಮಾರಂಭ ನಡೆಯುವುದು.

ಜ. 3ರಿಂದ 7ರವರೆಗೆ ಪ್ರತಿ ದಿನ ಪ್ರಾತಃಕಾಲ ಶ್ರೀ ಜಗದ್ಗುರು ರೇಣುಕಾಚಾರ್ಯರು ಅವತರಿಸಿದ ಶ್ರೀ ಸ್ವಯಂಭು ಸೋಮೇಶ್ವರ ಮಹಾಲಿಂಗಕ್ಕೆ ಮಹಾರುದ್ರಾಭಿಷೇಕ, ವಿಶೇಷ ಪೂಜೆ, ಸಹಸ್ರ ಪುಷ್ಪಾರ್ಚನೆ ಹಾಗೂ ಶ್ರೀ ಚಂಡಿಕಾಂಬಾ ದೇವಿಗೆ ಕುಂಕುಮಾರ್ಚನೆ ಹಾಗೂ ಶ್ರೀ ರಂಭಾಪುರಿ ಜಗದ್ಗುರುಗಳವರ ಇಷ್ಟಲಿಂಗ ಮಹಾಪೂಜಾ ಜರುಗುವುದು. ಐದೂ ದಿನಗಳ ಸಮಾರಂಭಗಳಲ್ಲಿ ಕರ್ನಾಟಕ ಮತ್ತು ತೆಲಂಗಾಣದ ಸಚಿವರು, ಗಣ್ಯರು, ವಿವಿಧ ಮಠಾಧೀಶರು ಹಾಗೂ ಶ್ರೀ ಕೊಲ್ಲಿಪಾಕಿ ಸೋಮೇಶ್ವರ ಜಗದ್ಗುರು ರೇಣುಕಾಚಾರ್ಯ ಡೆವೆಲಪಮೆಂಟ್ & ಚಾರಿಟೇಬಲ್ ಟ್ರಸ್ಟ್‌ನ ಪದಾಧಿಕಾರಿಗಳು ಸದಸ್ಯರು ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

### ಹಮಾಲರ-ಚಕ್ಕಡಿಯವರ ಸಂಘದಿಂದ ಅಯ್ಯಪ್ಪ ನಾಯ್ಕರ್‌ಗೆ ಸನ್ಮಾನ

# ಶಿಕ್ಷಣದಿಂದ ವ್ಯಕ್ತಿ ದೊಡ್ಡ ಸ್ಥಾನವನ್ನು ತಲುಪಬಲ್ಲ



**■ವಿಜಯಸಾಕ್ಷಿ ಸುದ್ದಿ, ಗದಗ**

ಶ್ರಮಿಕರಾಗಿರುವ ಹಮಾಲರು ಮತ್ತು ಚಕ್ಕಡಿಯವರು ತಮ್ಮ ಮಕ್ಕಳಿಗೆ ಆದರ್ಶ ಮೌಲ್ಯಗಳೊಂದಿಗೆ ಉತ್ತಮ ಶಿಕ್ಷಣ ನೀಡಿ ಅವರ ಭವ್ಯ ಭವಿಷ್ಯವನ್ನು ರೂಪಿಸಲು ಮುಂದಾಗಬೇಕು. ಶಿಕ್ಷಣದಿಂದ ವ್ಯಕ್ತಿ ದೊಡ್ಡ ಸ್ಥಾನವನ್ನು ತಲುಪಬಲ್ಲ ಎಂದು ಎಪಿಎಂಸಿ ಯಾರ್ಡ್‌ನ ಗದಗ ಬೆಟಗೇರಿ ಜನರಲ್ ವರ್ಕರ್ಸ್ ಹಾಗೂ ಹಮಾಲರ ಚಕ್ಕಡಿಯವರ ಸಮಿತಿಯ ಅಧ್ಯಕ್ಷ ಸುಭಾಸ್ ಕಟಗೇರಿ ಹೇಳಿದರು. ಮಹರ್ಷಿ ವಾಲ್ಮೀಕಿ ಪರಿಶಿಷ್ಠ ಪಂಗಡದ ಬಾಲಕರ ವಸತಿ ನಿಲಯದ ಸಭಾಂಗಣದಲ್ಲಿ ಸಂಘದಿಂದ ಏರ್ಪಡಿಸಿದ್ದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಮಿತಿಯ ಗೃಹ ಮಂಡಳಿ ವಿಭಾಗದ ಅಧ್ಯಕ್ಷ ಆದಪ್ಪ ಮಾರೆಪ್ಪನವರ ಮಾತನಾಡಿ, ಕಷ್ಟದ ಜೀವನ ಬದುಕಿನಲ್ಲಿ ಪಾಠ ಕಲಿಸುವದು. ಹಮಾಲರ, ಚಕ್ಕಡಿಯವರ, ಕಾರ್ಮಿಕರ ಮಕ್ಕಳು ಇಂದು ಕಷ್ಟಪಟ್ಟು ಅಭ್ಯಾಸ ಮಾಡಿ ಉನ್ನತ ಶಿಕ್ಷಣ ಪಡೆದು ಜೀವನ ರೂಪಿಸಿಕೊಂಡಿರುವ ಉದಾಹರಣೆಗಳಿವೆ ಎಂದರಲ್ಲದೆ, ಅಯ್ಯಪ್ಪ ನಾಯ್ಕರ್ ಅವರ ನಾಯಕತ್ವದ ಗುಣಗಳನ್ನು ಹಾಗೂ ಪರಿಶ್ರಮ ಸಾಧನೆಯನ್ನು ಶ್ಲಾಘಿಸಿದರು.

ಗದಗ ಜಿಲ್ಲಾ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಗೂಳಯ್ಯ ಮಾಲಗಿತ್ತಿಮಠ ಹಾಗೂ ಮಾಜಿ ಸೈನಿಕ ವೀರಪ್ಪ ಬಿಂಗಿ ಅವರು ಶಿಕ್ಷಣ ಬದುಕಿನಲ್ಲಿ ಬದಲಾವಣೆ ತರಬಲ್ಲದು ಕಾರಣ ನಾವಿಂದು ಶಿಕ್ಷಣಕ್ಕೆ ಒತ್ತು ನೀಡಬೇಕೆಂದರು.

ಇದೇ ಸಂದರ್ಭದಲ್ಲಿ ಕಾಶೀ ಯಾತ್ರೆ ಕೈಗೊಳ್ಳುತ್ತಿರುವ ಹಮಾಲರ ಮುಖಂಡ ಮಹರ್ಷಿ ವಾಲ್ಮೀಕಿ ಪರಿಶಿಷ್ಠ ಪಂಗಡದ ಬಾಲಕರ ವಸತಿ ನಿಲಯದ ಅಧ್ಯಕ್ಷ ಅಯ್ಯಪ್ಪ ನಾಯ್ಕರ್, ಉಪಾಧ್ಯಕ್ಷೆ ಶಾರದಾ ಅಯ್ಯಪ್ಪ ನಾಯ್ಕರ್ ಹಾಗೂ ಕೃಷ್ಣಾ ಅಯ್ಯಪ್ಪ ನಾಯ್ಕರ್ ಅವರನ್ನು ಗದಗ-ಬೆಟಗೇರಿ ಜನರಲ್ ವರ್ಕರ್ಸ್ ಹಾಗೂ ಹಮಾಲರ ಚಕ್ಕಡಿಯವರ ಸಮಿತಿಯಿಂದ ಸನ್ಮಾನಿಸಿ ಯಾತ್ರೆಗೆ ಶುಭ ಕೋರಲಾಯಿತು.

ಸಮಿತಿಯ ಕಾರ್ಯದರ್ಶಿ ಇಮಾಮಸಾಬ ರೋಣದ ಸ್ವಾಗತಿಸಿ ನಿರೂಪಿಸಿದರು, ರಾಜೇಸಾಬ ಕಣವಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಹುಸೇನಸಾಬ ವಡವಿ ಪರಿಚಯಿಸಿದರು. ಕೊನೆಗೆ ಮಾರುತಿ ರಾಯಲ್‌ರಡ್ಡಿ ವಂದಿಸಿದರು.

ಸಮಾರಂಭದಲ್ಲಿ ರಾಮಚಂದ್ರ ಹರಿಜನ, ಜಹಾಂಗೀರಸಾಬ, ಮುಕ್ತುಂಸಾಬ ನಾಗನೂರ, ಯಲ್ಲಪ್ಪ ಬೇವಿನಮರದ, ರಿಯಾಜ ದೊಡ್ಡಮನಿ, ರಂಗಪ್ಪ ಯರಗುಡಿ, ಅಲ್ಲಾಭಕ್ಷಿ ನದಾಫ್, ರವಿ ರಾಯಲದಡ್ಡಿ, ಬಸವರಾಜ ಬೇವಿನಮರದ, ಈರಣ್ಣ ಮಾಡೊಳ್ಳಿ, ಈರಣ್ಣ ಪ್ರತಾಪಸಿಂಗ, ಮಹ್ಮದ ಅಣ್ಣಿಗೇರಿ, ಹನುಮಂತಪ್ಪ ಜಾನಗಾರ, ಮಾಯಪ್ಪ ಬೆಣ್ಣಿ, ಗೋವಿಂದಪ್ಪ ಮುಂಡರಗಿ, ಹಮೀದ್ ಅಣ್ಣಿಗೇರಿ, ಬಸವರಾಜ ಸೂಡಿ, ಈರಪ್ಪ ಮುಧೋಳ ಮುಂತಾದವರು ಪಾಲ್ಗೊಂಡಿದ್ದರು.

> ಸನ್ಮಾನ ಸ್ವೀಕರಿಸಿದ ಅಯ್ಯಪ್ಪ ನಾಯ್ಕರ್ ತಮ್ಮ ಕಷ್ಟದ ಬದುಕನ್ನು ಸ್ಮರಿಸಿಕೊಂಡರು. ದುಡಿದ ವ್ಯಕ್ತಿಗೆ ಇಳಿ ವಯಸ್ಸಿನಲ್ಲಿ ಮಕ್ಕಳ ಆಶ್ರಯವಿಲ್ಲದೆ ಪರಿತಪಿಸುವವರಿಗಾಗಿ ವೃದ್ಧಾಶ್ರಮ ತೆರೆಯುವ ಉದ್ದೇಶವಿದೆ. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿದರೆ ಏನೆಲ್ಲಾ ಸಾಧಿಸಬಹುದು ಎಂಬುದಕ್ಕೆ ನಮ್ಮ ಹಮಾಲರ ಮತ್ತು ಚಕ್ಕಡಿಯವರ, ಕಾರ್ಮಿಕರ ಮಕ್ಕಳು ಶಿಕ್ಷಣ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆ, ಪಡೆದ ಉನ್ನತ ಹುದ್ದೆಯೇ ಸಾಕ್ಷಿಯಾಗಿವೆ ಎಂದರು.

# 2 ಹೊಸ ಬಸ್‌ಗಳ ಕಾರ್ಯಾರಂಭ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಹೊಸ ವರ್ಷದ ಮೊದಲ ದಿನವೇ ಶಾಸಕ ಡಾ.ಚಂದ್ರು ಲಮಾಣಿ ಪಟ್ಟಣದ ಬಸ್ ನಿಲ್ದಾಣದಲ್ಲಿ 2 ಹೊಸ ಬಸ್‌ಗಳ ಕಾರ್ಯಾರಂಭಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಸರ್ಕಾರದ ಶಕ್ತಿ ಯೋಜನೆಯ ಪರಿಣಾಮ ಸಾರಿಗೆ ವ್ಯವಸ್ಥೆಯಲ್ಲಿ ಸಾಕಷ್ಟು ಸಮಸ್ಯೆಗಳು ಉಲ್ಬಣವಾಗಿರುವುದು ಸತ್ಯ. ಅಲ್ಲದೇ ರಸ್ತೆಗಳ ಸ್ಥಿತಿಯೂ ಬಹಳಷ್ಟು ಹದಗೆಟ್ಟಿದೆ. ಸಾರಿಗೆ ಇಲಾಖೆಯಲ್ಲಿ ನೌಕರರ ಕೊರತೆಯೂ ಇದೆ. ಈ ಎಲ್ಲದರ ನಡುವೆ ಜನರಿಗೆ ಅತ್ಯವಶ್ಯಕವಾದ ಸಾರಿಗೆ ಸೇವೆಯನ್ನು ನೀಡುವ ನಿಟ್ಟಿನಲ್ಲಿ ಅಧಿಕಾರಿ, ಸಿಬ್ಬಂದಿ ವರ್ಗ ಪ್ರಾಮಾಣಿಕ ಪ್ರಯತ್ನ ಮಾಡಬೇಕು.




ಮುಖ್ಯವಾಗಿ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಸಕಾಲಿಕ ಬಸ್ಸಿನ ಸೇವೆ ನೀಡುವ ಗುರುತರ ಜವಾಬ್ದಾರಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ನಿಭಾಯಿಸಬೇಕು. ಹತ್ತಾರು ಸಮಸ್ಯೆಗಳ ನಡುವೆ ಲಕ್ಷ್ಮೇಶ್ವರ ಘಟಕದ ಅಧಿಕಾರಿಗಳು, ಚಾಲಕ-ನಿರ್ವಾಹಕ ಮತ್ತು ಸಿಬ್ಬಂದಿ ವರ್ಗ ಉತ್ತಮ ಸೇವೆ ನೀಡುತ್ತಿರುವುದು ಶ್ಲಾಘನೀಯ ಎಂದ ಅವರು, ಹಿಂದುಳಿದ ಶಿರಹಟ್ಟಿ ಕ್ಷೇತ್ರಕ್ಕೆ ಇನ್ನಷ್ಟು ಹೊಸ ಬಸ್‌ಗಳನ್ನು ನೀಡಬೇಕೆಂದು ಸಾರಿಗೆ ಇಲಾಖೆ ಸಚಿವರಿಗೆ ಮನವಿ ಮಾಡಿದ್ದೇನೆ ಎಂದರು.

ಈ ವೇಳೆಗೆ ಬಿಜೆಪಿ ಶಿರಹಟ್ಟಿ ಮಂಡಲದ ಅಧ್ಯಕ್ಷ ಸುನೀಲ ಮಹಾಂತೆಶೆಟ್ಟರ, ನಗರ ಘಟಕದ ಅಧ್ಯಕ್ಷ ನವೀನ ಬೆಳ್ಳಟ್ಟಿ, ವಿಜಯ ಬೂದಿಹಾಳ, ಗಿರೀಶ್ ಚೌರಡ್ಡಿ, ಮಂಜುನಾಥ ಗೊರವರ, ಬಸವರಾಜ ಚಕ್ರಸಾಲಿ, ಸಂತೋಷ ಜಾವೂರ್, ಶಕ್ತಿ ಕತ್ತಿ, ಅನಿಲ ಮೂಲಗುಂದ, ರಾಜು ರೆಡ್ಡಿ, ತುಕಪ್ಪ ಪೂಜಾರ, ವೀರೇಶ ತಂಗೋಡ, ಜಾನು ಲಮಾಣಿ, ಘಟಕದ ವ್ಯವಸ್ಥಾಪಕಿ ಸವಿತಾ ಆದಿ ಸೇರಿದಂತೆ ಸಿಬ್ಬಂದಿ ವರ್ಗದವರು ಇದ್ದರು.

# ಶ್ರೀ ಅಯ್ಯಪ್ಪ ಸ್ವಾಮಿ ಪೂಜಾ ಕಾರ್ಯಕ್ರಮ

**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ವಿವೇಕಾನಂದ ಬಡಾವಣೆ (ರಾಜೀವಗಾಂಧಿ ನಗರ) ಶ್ರೀ ಸಾಯಿಬಾಬಾ ಮಂದಿರದ ಎದುರಿಗೆ ಹಾತಲಗೇರಿ ರಸ್ತೆ ಓಂ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಎ.ನಾಗರಾಜ ಗುರುಸ್ವಾಮಿಗಳ 44 ವರ್ಷಗಳ ಅವಿಸ್ಮರಣೀಯ ಸೇವೆ, ಗುರುಸ್ವಾಮಿಗಳು ಹಾಗೂ ಶಿಷ್ಯ ಬಳಗದಿಂದ ನಡೆಸಿ ಕೊಂಡು ಬಂದಿರುವಂತೆ ಈ ವರ್ಷ ಜ.4ರ ಸಾಯಂಕಾಲ 3 ಗಂಟೆಗೆ ಮಸಾರಿ ಶ್ರಿ ಸಿದ್ಧಿವಿನಾಯಕ ದೇವಸ್ಥಾನದಿಂದ ಎ. ನಾಗರಾಜ ಗುರುಸ್ವಾಮಿ ಹಾಗೂ ಶಿಷ್ಯ ಬಳಗದ ನೇತೃತ್ವದಲ್ಲಿ ಅಯ್ಯಪ್ಪ ಸ್ವಾಮಿಯ ಮೂರ್ತಿ ಮೆರವಣಿಗೆಯು ಜ್ಯೋತಿ ಮತ್ತು ಪೂರ್ಣ ಕುಂಭದೊಂದಿಗೆ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಕ್ಕೆ ತಲುಪುವುದು. ನಂತರ ಶ್ರೀ ಅಯ್ಯಪ್ಪಸ್ವಾಮಿಯ ಅಭಿಷೇಕ ಹಾಗೂ ಪೂಜೆ ಜರುಗುವುದು.

ಜ.5ರ ಬೆಳಿಗ್ಗೆ 10-30 ಗಂಟೆಗೆ 25ನೇ ವಾರ್ಷಿಕೋತ್ಸವ ನಿಮಿತ್ತ ಮಧ್ಯಾಹ್ನ 12.35ಕ್ಕೆ ಮಹಾ ಅನ್ನಸಂತರ್ಪಣೆ ಜರುಗುವುದು. ಸಂಜೆ 8 ಗಂಟೆಗೆ ಶ್ರೀ ಅಯ್ಯಪ್ಪಸ್ವಾಮಿ ಭಜನೆ ಹಾಗೂ ಮಹಾಪೂಜೆ ಜರುಗುವುದು. ಜ.7ರ ಬೆಳಿಗ್ಗೆ 9 ಗಂಟೆಗೆ ಇರುಮುಡಿ ಕಟ್ಟುವ ಕಾರ್ಯಕ್ರಮ ಜರುಗುವುದು.

ಸಕಲ ಸದ್ಭಕ್ತರು ಈ ಎಲ್ಲ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಪ್ರಕಟಣೆ ವಿನಂತಿಸಿದೆ.

## ಗುತ್ತಿಗೆದಾರ ಆತ್ಮಹತ್ಯೆ ಪ್ರಕರಣ । ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ : ಸಿಎಂ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಪ್ರಿಯಾಂಕ್ ಖರ್ಗೆಯವರು ರಾಜೀನಾಮೆ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇದು ರಾಜಕೀಯ ದ್ವೇಷದಿಂದ ಮಾಡಿರುವ ಆರೋಪ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.ಇಂದು (ಜ.1) ವಿಧಾನಸೌಧದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಸಿಎಂ, ಆತ್ಮಹತ್ಯೆ ಮಾಡಿಕೊಂಡಿರುವ ಬೀದರ್‌ನ ಗುತ್ತಿಗೆದಾರನ ಡೆತ್‌ನೋಟ್‌ನಲ್ಲಿ ಸಚಿವ ಪ್ರಿಯಾಂಕ್ ಖರ್ಗೆಯವರ ಹೆಸರಿಲ್ಲ. ಈ ಪ್ರಕರಣದಲ್ಲಿ ಅವರ ಪಾತ್ರವಾಗಲಿ, ಸಾಕ್ಷ್ಯವಾಗಲಿ ಇಲ್ಲ. ಆದ್ದರಿಂದ ರಾಜೀನಾಮೆ ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರು.ಆದಾಗ್ಯೂ, ಯಾವುದೇ ವಿಚಾರಣೆಗೆ ತಾನು ಸಿದ್ಧವಿರುವುದಾಗಿ ಸಚಿವರು ತಿಳಿಸಿದ್ದಾರೆ. ಆದರೆ ಇಂತಹದೇ ಪ್ರಕರಣದಲ್ಲಿ ಈ ಹಿಂದೆ ಬಿಜೆಪಿಯ ಕೆ.ಎಸ್.ಈಶ್ವರಪ್ಪಅವರ ಹೆಸರನ್ನು ಡೆತ್‌ನೋಟ್‌ನಲ್ಲಿ ಬರೆಯಲಾಗಿತ್ತು. ಪ್ರಕರಣದ ಸಂಬಂಧ ದಾಖಲಾಗಿರುವ ದೂರಿನ ತನಿಖೆಯನ್ನು ಸಿಐಡಿಗೆ ವಹಿಸಲಾಗಿದ್ದು, ವರದಿ ಬಂದ ನಂತರ ಸೂಕ್ತ ಕ್ರಮಕೈಗೊಳ್ಳಲಾಗುವುದು. ಇದು ರಾಜಕೀಯ ದ್ವೇಷದಿಂದ ಮಾಡಿರುವ ಆರೋಪ ಎಂದು ಹೇಳಿದರು.

'ಬಿಜೆಪಿ ಯಾವುದೇ ಪ್ರಕರಣವನ್ನು ಸಿಬಿಐಗೆ ವಹಿಸಿಲ್ಲ'

ಬಿಜೆಪಿಯವರು ತನಿಖೆಯನ್ನು ಸಿಬಿಐಗೆ ವಹಿಸಬೇಕೆಂದು ಒತ್ತಾಯಿಸುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿಎಂ, ರಾಜ್ಯದ ಪೊಲೀಸರ ಬಗ್ಗೆ ಬಿಜೆಪಿಯವರಿಗೆ ನಂಬಿಕೆಯಿಲ್ಲವೇ? ಬಿಜೆಪಿಯವರು ಅಧಿಕಾರದಲ್ಲಿದ್ದಾಗ, ಒಂದು ಪ್ರಕರಣವನ್ನೂ ಸಿಬಿಐಗೆ ವಹಿಸಿರಲಿಲ್ಲ.

ಬಸವದಳದ 1626ನೇ ಶರಣ ಸಂಗಮ ಕಾರ್ಯಕ್ರಮದಲ್ಲಿ ಪೂ. ಗಿರಿಜಕ್ಕ ಧರ್ಮರೆಡ್ಡಿ

# ನಡೆ-ನುಡಿ ಒಂದಾದಾಗ ಶರಣನಾಗಲು ಸಾಧ್ಯ

■ವಿಜಯಸಾಕ್ಷಿ ಸುದ್ದಿ, ಗದಗ

ನಾವು ಸಾಮಾನ್ಯವಾಗಿ ವ್ಯಕ್ತಿಗಳಿಗೆ ಗೌರವಯುತವಾಗಿ ಕರೆಯಲು 'ಶರಣ'ನೆಂಬ ಪದ ಬಳಸುತ್ತೇವೆ. ಅವರನ್ನು 'ಶರಣರೆ' ಎನ್ನುತ್ತೇವೆ. ಆದರೆ ಬಸವಾದಿ ಶರಣರ ವಿಚಾರಧಾರೆಯಲ್ಲಿ ಶರಣರೆಂದರೆ ಬರೀ ಕರೆಯುವ, ಮಾತನಾಡಿಸುವ ಅಲಂಕಾರಿಕ ಪದವಲ್ಲ. ಇಲ್ಲಿ ಶರಣರೆಂದರೆ ಅನುಭಾವಿ, ಆಚಾರವುಳ್ಳವ, ಜ್ಞಾನದ ಅರಿವನ್ನು ಹೊಂದಿರುವಾತನಾಗಿರುತ್ತಾನೆ. ಶರಣರ ಪ್ರಕಾರ ಹುಟ್ಟಿದ ಮನುಷ್ಯ ಹೇಗೆಂದರೆ ಹಾಗೆ ಬದುಕುವುದಲ್ಲ. ಆತನಿಗೆ ಸಂಸ್ಕಾರ ಮುಖ್ಯವಾಗಿರುತ್ತದೆ ಈ ಸಂಸ್ಕಾರವೇ ಆತನನ್ನು ಹಂತ ಹಂತವಾಗಿ ದೈವತ್ವದ ಕಡೆ ಒಯ್ಯುವುದು ಎಂದು ಶರಣತತ್ವ ಚಿಂತಕಿ ಪೂಜ್ಯ ಗಿರಿಜಕ್ಕ ಧರ್ಮರೆಡ್ಡಿಯವರು ಹೇಳಿದರು.

ಅವರು ಗದಗ ತಾಲೂಕು ಶರಣ ಸಾಹಿತ್ಯ ಪರಿಷತ್ತು, ಗದಗ ತಾಲೂಕಾ ಕದಳಿ ಮಹಿಳಾ ವೇದಿಕೆ ಹಾಗೂ ಬಸವದಳ ಗದಗ-ಬೆಟಗೇರಿ ಇವುಗಳ ಸಂಯುಕ್ತಾಶ್ರಯದಲ್ಲಿ ನಡೆದ 1626ನೇ ಶರಣ ಸಂಗಮ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀ ಕೂರಾ ಪಾಂಡುರಂಗ ಕೂರಾ ಈಶ್ವರಪ್ಪ ಶೆಟ್ಟಿ ಇವರ ಹೆಸರಿನಲ್ಲಿ ಪ್ರೊ. ಎಂ. ಬಸವರಾಜ ಮಟಮಾರಿ




ನೀಡಿದ ದತ್ತಿ ಕಾರ್ಯಕ್ರಮದಲ್ಲಿ 'ಶರಣರ ಜೀವನ' ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅನೇಕ ಶರಣರು ಧರ್ಮಗುರು ಬಸವಣ್ಣನವರು ದೇವರು ಮತ್ತು ಭೂವಿಗೆ ನಿಚ್ಚಣಿಕೆಯಾಗಿದ್ದಾರೆಂದು ತಮ್ಮ ವಚನದಲ್ಲಿ ಹೇಳುತ್ತಾರೆ. ಹಾಗೆಯೇ ಬಸವಣ್ಣನವರು ಕೂಡಾ ಭಕ್ತಿಯ ದಾರಿ ತುಳಿದಾಗ ಮಾತ್ರ ಶರಣ ಮಾರ್ಗ ಲಭಿಸುತ್ತದೆನ್ನುತ್ತಾರೆ. ಇಲ್ಲಿ ಭಕ್ತಿಯೆಂದರೆ ಆಡಂಬರವಲ್ಲ, ಬರೀ ವಿಭೂತಿ, ರುದ್ರಾಕ್ಷಿ ಧಾರಣಿಸಿದ ಪೂಜೆ ಮಾತ್ರವಲ್ಲ. ಆತ ದೇವನಲ್ಲಿ ಅನನ್ಯವಾಗಿ ಪ್ರೀತಿಯಿಡುವುದು. ಅದನ್ನೇ ಶರಣರು ಭಕ್ತಿ ಎನ್ನುವರು. ಅಂದು ಶರಣರು ಶರಣತ್ವದ ಕಟ್ಟಡವನ್ನು ಬರೀ ಕಲ್ಲುಮಣ್ಣಿನಿಂದ ಕಟ್ಟಲಿಲ್ಲ, ದೈವತ್ವ ಪ್ರೀತಿ, ಭಕ್ತಿಯಿಂದ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿದರು. ಇಲ್ಲಿ ಭಕ್ತಿಯ ಮತ್ತೊಂದು ರೂಪವೇ ಪ್ರೇಮವಾಗಿದೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ವಚನ ಪ್ರಾರ್ಥನೆ ರೇಣಕ್ಕ ಕರಿಗೌಡ್ರರವರಿಂದ ಜರುಗಿತು. ಸಭೆಯ ಆರಂಭದಲ್ಲಿ ಇತ್ತೀಚಿಗೆ ನಿಧನರಾದ ಮಾಜಿ ಪ್ರಧಾನಿ ಡಾ. ಮನಮೋಹನಸಿಂಗರಿಗೆ ಶ್ರದ್ಧಾಂಜಲಿ ಕೋರಲಾಯಿತು. ಸ್ವಾಗತವನ್ನು ಎಸ್.ಎ. ಮುಗದ ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ವಿ.ಕೆ. ಕರಿಗೌಡರ ವಹಿಸಿ ಅಧ್ಯಕ್ಷೀಯ ಮಾತಗಳನ್ನಾನಾಡಿದರು. ಗದಗ

ಆರಂಭದಲ್ಲಿ ಎನ್.ಎಚ್. ಹಿರೇಸಕ್ಕರಗೌಡ್ರರವರು ಶರಣೆ ಸತ್ಯಕ್ಕನವರ ವಚನಗಳನ್ನು ನಿರ್ವಚನ ಗೈಯ್ಯುತ್ತಾ ಸತ್ಯಕ್ಕನವರು 28 ವಚನಗಳನ್ನು ಬರೆದಿದ್ದಾರೆ. ಶಿವಮೊಗ್ಗ ಜಿಲ್ಲೆಯ ಹಿರೇಜಂಬರಗಿ ಅವರ ಜನ್ಮಸ್ಥಳವಾಗಿದೆ. ಸತ್ಯಕ್ಕ ತುಂಬ ನಿರ್ಭಿಡೆಯಿಂದ ವಚನ ರಚನೆ ಮಾಡಿದ್ದಾರೆ. ಅವರ ವಚನಗಳಲ್ಲಿ ಏಕದೇವೋಪಾಸನೆ, ದೈವತ್ವದೆಡೆಗೆ ಸಾಗುವುದರ ಬಗ್ಗೆ ತಮ್ಮ ವಚನಗಳಲ್ಲಿ ಹೇಳುತ್ತಾರೆಂದು ಶರಣರ ಬಹಳಷ್ಟು ವಚನಗಳನ್ನು ಉದಾಹರಿಸಿಕೊಂಡು ವಚನಗಳನ್ನು ಬಿಡಿಸಿ ಹೇಳಿದರು

ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಕೆ.ಎ. ಬಳಿಗಾರವರು ಚಿತ್ರದುರ್ಗದಲ್ಲಿ ನಡೆಯುವ 13ನೇ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮದ ವಿವರ ನೀಡಿ ಭಾಗವಹಿಸಲು ವಿನಂತಿಸಿಕೊಂಡರು.

ಕಾರ್ಯಕ್ರಮ ನಿರೂಪಣೆಯನ್ನು ಗದಗ ತಾಲೂಕಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರಕಾಶ ಅಸುಂಡಿ ನಡೆಸಿಕೊಟ್ಟರು. ಗದಗ ತಾಲೂಕ ಕದಳಿ ಮಹಿಳಾ ವೇದಿಕೆ ಅಧ್ಯಕ್ಷರಾದ ಸುಲೋಚನಾ ಎಂ.ಐಹೊಳೆ ಶರಣು ಸಮರ್ಪಣೆಗೈದರು.

# ಬಸವಪ್ರಭೆ ಆವರಣದಲ್ಲಿ ನಡಿಗೆ ಸ್ಪರ್ಧೆ

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಎಸ್.ವಾಯ್ .ಬಿ.ಎಂ.ಎಸ್. ಯೋಗಪಾಠ ಶಾಲೆಯ ಬಸವ ಯೋಗ ಮಹಾವಿದ್ಯಾಲಯ ಹಾಗೂ ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರ ಗದಗ ಇವರುಗಳ ಸಹಯೋಗದಲ್ಲಿ 2025ರ ನೂತನ ಕ್ಯಾಲೆಂಡರ್ ವರ್ಷಾಚರಣೆ ಪ್ರಯುಕ್ತ ಆಯೋಜಿಸಿದ್ದ ಹರ್ಷೋತ್ಸವ – 2025 ಕಾರ್ಯಕ್ರಮದ ಅಂಗವಾಗಿ ಸಿದ್ಧಲಿಂಗ ನಗರದಲ್ಲಿನ ಬಸವಪ್ರಭೆ ಆವರಣದಲ್ಲಿ ಪುರಷ ಮತ್ತು ಮಹಿಳೆಯರಿಗೆ 500 ಮೀಟರ್ ಅಂತರದ ನಡಿಗೆ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.



ಮಹಿಳೆಯರ ವಿಭಾಗದಲ್ಲಿ ಪ್ರಥಮ-ಗೌರಿ ಜೀರಂಕಳಿ, ದ್ವಿತೀಯ – ವೀಣಾ ಮಾಲಿಪಾಟೀಲ, ತೃತೀಯ-ಜಯಶ್ರೀ ಡಾವಣಗೇರಿ, ಸಮಾಧಾನಕರ-ಸುನಂದಾ ಜ್ಯಾನೋಪಂತರ , ಪುರುಷರ ವಿಭಾಗದಲ್ಲಿ ಪ್ರಥಮ – ವಿ.ಎಂ. ಮುಂದಿನಮನಿ, ದ್ವಿತೀಯ –ಷಡಕ್ಷರಿ ಮೆಣಸಿನಕಾಯಿ, ತೃತೀಯ – ಆನಂದ ಬದಿ, ಸಮಾಧಾನಕರ-ಶಿವನಗೌಡ ಬಿ. ಗೌಡರ ಸ್ಥಾನ ಪಡೆದುಕೊಂಡರು.

ಸ್ಪರ್ಧೆಯಲ್ಲಿ ವಿಜೇತರಾದ ಮತ್ತು ಭಾಗವಹಿಸಿದ ಸ್ಪರ್ಧಿಗಳಿಗೆಲ್ಲರಿಗೂ ಸಂಘಟಕರ ಪರವಾಗಿ ಬಸವ ಯೋಗ ಮಹಾವಿದ್ಯಾಲಯದ ಪ್ರಾಚಾರ್ಯ ಕೆ.ಎಸ್. ಪಲ್ಲೇದ ಅಭಿನಂದನೆಗಳನ್ನು ತಿಳಿಸಿದ್ದಾರೆ.

# ಜಿಲ್ಲಾಡಳಿತದಿಂದ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಗದಗ ನಗರದ ಜಿಲ್ಲಾಡಳಿತ ಭವನದ ಮುಖ್ಯ ಸಭಾಂಗಣದಲ್ಲಿ ಬುಧವಾರ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಅವರ ಸಂಸ್ಮರಣಾ ದಿನಾಚರಣೆ ನಿಮಿತ್ತ ವಿಧಾನ ಪರಿಷತ್ ಶಾಸಕ ಎಸ್ ವಿ ಸಂಕನೂರ ಅವರು ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಮರ್ಪಿಸಿದರು. ಮಾಜಿ ಪ್ರಧಾನಮಂತ್ರಿಗಳಾದ ಡಾ. ಮನಮೋಹನ ಸಿಂಗ್ ಅವರ ನಿಧನದಿಂದಾಗಿ ಶೋಕಾಚರಣೆ ಜಾರಿ ಇರುವ ಹಿನ್ನೆಲೆಯಲ್ಲಿ, ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ



ಮೂಲಕ ಗೌರವ ಸಲ್ಲಿಸಿ, ಸಂಸ್ಮರಣಾ ದಿನಾಚರಣೆಯನ್ನು ಸರಳವಾಗಿ ಆಚರಣೆ ಮಾಡಲಾಯಿತು.

ಜಿಲ್ಲಾಧಿಕಾರಿ ಗೋವಿಂದ ರೆಡ್ಡಿ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭರತ್ ಎಸ್, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಉಪವಿಭಾಗಾಧಿಕಾರಿ ಗಂಗಪ್ಪ ಎಂ, ಗದಗ-ಬೆಟಗೇರಿ ನಗರ ಸಭೆಯ ಪೌರಾಯುಕ್ತ ಮಹೇಶ್ ಪೋತದಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಬಿ, ವಾರ್ತಾಧಿಕಾರಿ ವಸಂತ ಮಡ್ಲೂರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಹಾಗೂ ಸಮಾಜದ ಮುಖಂಡರು ಜಕಣಾಚಾರಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

# ಭಕ್ತರ ನಿಸ್ವಾರ್ಥ ಸೇವಾ ಭಾವ ಶ್ಲಾಘನೀಯ

■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಸಮಾಜಮುಖಿ ಕಾರ್ಯದೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರ ಕುರಿತು ಪ್ರತಿ ಶಿವಾನುಭವದಲ್ಲಿ ಉಪನ್ಯಾಸ ನಡೆಯುತ್ತವೆ. ಈ ದಿಸೆಯಲ್ಲಿ ಸಾಧಕರ ಸಾಧನೆಯ ವಿಷಯಗಳನ್ನು ಕೇಂದ್ರೀಕರಿಸಿ ಯುವಕರು, ಭಕ್ತರು ಸಾಧನೆಯ ಹಾದಿ ಹಿಡಿಯಬೇಕು ಎಂದು ಡಾ. ಕೊಟ್ಟೂರೇಶ್ವರ ಮಹಾಸ್ವಾಮಿಗಳು ಸಲಹೆ ನೀಡಿದರು.

ಇಲ್ಲಿಯ ಸಮೀಪದ ಹರ್ಲಾಪೂರ ಕೊಟ್ಟೂರೇಶ್ವರ ಮಠದಲ್ಲಿ ಹಮ್ಮಿಕೊಂಡಿದ್ದ 304ನೇ ಶಿವಾನುಭವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ನಿರಂತರವಾಗಿ ನಡೆದು ಬಂದಿರುವ ಶಿವಾನುಭವ ಕಾರ್ಯಕ್ರಮ ಇಂದು 304ನೇ ಸಂಚಿಕೆ ನಡೆಯುತ್ತಿರುವುದು ಸಂತಸ ತಂದಿದೆ. ಪ್ರತಿ ಶಿವಾನುಭವ ಕಾರ್ಯಕ್ರಮದಲ್ಲಿ ಶಿಕ್ಷಣ, ಕೃಷಿ, ಸಂಗೀತ, ಕ್ರೀಡೆ, ಜಾನಪದ ಸೇರಿದಂತೆ ವಿವಿಧ



ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹನೀಯರನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಗಿದ್ದು, ಭಕ್ತರ ನಿಸ್ವಾರ್ಥ ಸೇವಾ ಮನೋಭಾವನೆ ಮೆಚ್ಚುವಂತದ್ದು ಎಂದರು.

ಗ್ರಾ.ಪಂ ಸದಸ್ಯ ಶಿವಾನಂದ ಪಟ್ಟೇದ ಮಾತನಾಡಿ, ಶ್ರೀ ಮಠದ ಕೊಟ್ಟೂರೇಶ್ವರ ಸ್ವಾಮೀಜಿಗಳ ಸಮಾಜಮುಖಿ ಕಾರ್ಯದಿಂದ ಗ್ರಾಮವು ಧಾರ್ಮಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿಯಾಗುತ್ತಿದೆ. ಶ್ರೀ ಮಠದಿಂದ ಶಿಕ್ಷಣ ಸಂಸ್ಥೆಯು ಆರಂಭಿಸುವ ಇಚ್ಛೆಯನ್ನು ಶ್ರೀಗಳು ಹೊಂದಿದ್ದಾರೆ. ಪ್ರತಿದಿನ ಶ್ರೀಮಠದಲ್ಲಿ ಅನ್ನ ದಾಸೋಹ ನಡೆಯಬೇಕಾಗಿದ್ದು, ನಾವೆಲ್ಲರೂ ಸಹಾಯ-ಸಹಕಾರ ನೀಡಿ ಆರಂಭಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಮಹೇಶ ಕುಂಬಾರ, ಸೋಮಣ್ಣ ಬಾಲಬಸವರ, ಶೇಕಪ್ಪ ಪೂಜಾರ, ಶಿವಾನಂದ ಮುಂಡರಗಿ, ಮಹಾದೇವಪ್ಪ ಲಕ್ಕುಂಡಿ, ಉಪಸ್ಥಿತರಿದ್ದರು. ಕೆ.ಬಿ. ವೀರಾಪೂರ ಸಂಗೀತ ಸೇವೆ ನೀಡಿದರು. ವೆಂಕಟೇಶ ಜುಂಜಣಿ ನಮ್ಮೂರ ಲಕ್ಷ ದೀಪೋತ್ಸವ ಕಾರ್ಯಕ್ರಮ ಹಾಗೂ ರಾಜ್ಯಮಟ್ಟದ ಭಜನಾ ಸ್ಪರ್ಧೆಯ ಖರ್ಚು ವೆಚ್ಚದ ಕುರಿತು ವಿವರಿಸಿ ಕಾರ್ಯಕ್ರಮ ನಿರೂಪಿಸಿದರು.

# ನಿಸ್ವಾರ್ಥ ಸೇವೆಯಿಂದ ಜೀವನದ ಸಂತೃಪಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸೇವಾ ಹೀ ಪರಮೋ ಧರ್ಮ, ಸ್ವಾರ್ಥಕ್ಕಾಗಿ ಸ್ವಲ್ಪ, ಸಮಾಜಕ್ಕಾಗಿ ಎಲ್ಲವೂ ಎನ್ನುವ ನಿಸ್ವಾರ್ಥ ಸೇವೆಯಿಂದ ಜೀವನದ ಸಂತೃಪ್ತಿ, ಮುಕ್ತಿ ಹೊಂದಬಹುದಾಗಿದೆ. ಈ ನಿಟ್ಟಿನಲ್ಲಿ ಹಿಂದೂ ಸೇವಾ ಪ್ರತಿಷ್ಠಾನ ಸೇವೆಯಲ್ಲಿ ತೊಡಗಿಸಿಕೊಂಡಿದೆ ಎಂದು ಪ್ರತಿಷ್ಠಾನದ ನಿರ್ದೇಶಕ ಸುರೇಶ ಜಿ ಹೇಳಿದರು.


ಅವರು ಮಂಗಳವಾರ ಲಕ್ಷ್ಮೇಶ್ವರದ ಶಂಕರಭಾರತಿ ಕಲ್ಯಾಣ ಮಂಟಪದಲ್ಲಿ ಹಿಂದೂ ಸೇವಾ ಪ್ರತಿಷ್ಠಾನ ಸೇವಾಮಿತ್ರ ಯೋಜನೆ ಲಕ್ಷ್ಮೇಶ್ವರ ತಾಲೂಕು ಘಟಕದಿಂದ ಸೇವಾ ದಿನದ ನಿಮಿತ್ತ ವಿವಿಧ ಕ್ಷೇತ್ರದಲ್ಲಿ ನಿಸ್ವಾರ್ಥ ಸೇವೆಗೈಯುತ್ತಿರುವ ಮಹನೀಯರಿಗೆ 'ಸೇವಾಕಿರಣ' ಪ್ರಶಸ್ತಿ ಪ್ರದಾನ ಹಾಗೂ ಪ್ರತಿಷ್ಠಾನದಿಂದ ನಡೆಯುವ ಉಚಿತ ಹೊಲಿಗೆ



ಹಾಗೂ ಕಸೂತಿ ತರಬೇತಿ ಪಡೆದ 260 ತಾಯಂದಿರಿಗೆ ಪ್ರಮಾಣಪತ್ರ ವಿತರಣಾ ಸಮಾರಂಭದಲ್ಲಿ ಮಾತನಾಡಿದರು.

ಮನುಷ್ಯ ಸಮಾಜ ಜೀವಿಯಾಗಿದ್ದು, ಪ್ರತಿಯೊಬ್ಬ ವ್ಯಕ್ತಿ ತಾನು ಧರ್ಮ ಮಾರ್ಗದಿ ಸಂಪಾದಿಸಿದ ಆದಾಯದಲ್ಲಿ ಒಂದಷ್ಟು ಸಮಾಜ ಸೇವೆಗೆ ಮೀಸಲಾಗಿಸಬೇಕು. ದಾನ, ಧರ್ಮ, ತ್ಯಾಗ, ಕರುಣೆ ನಮ್ಮ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದ್ದು, ಇಂತಹ ಮಾನವೀಯ ಗುಣಗಳನ್ನು ಮಕ್ಕಳಲ್ಲಿ ಬಿತ್ತುವ ಜವಾಬ್ದಾರಿ ಎಲ್ಲರದ್ದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸೇವಾಮಿತ್ರ ಯೋಜನೆಯ ರಾಜ್ಯ ಸಂಯೋಜಕ ನಟರಾಜ ರಾನಡೆ ಪ್ರತಿಷ್ಠಾನದ ಸ್ಥಾಪಕರಾದ ದಿ. ಅಜಿತ ಕುಮಾರ ಅವರ ನೆನಪಿಗಾಗಿ ಪ್ರತೀ ವರ್ಷ ಸೇವಾದಿನ ಆಚರಿಸಲಾಗುತ್ತದೆ ಎಂದರು. ಈ ವೇಳೆ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆಗೈಯುತ್ತಿರುವ ಜಗದೀಶ ಸಂತಿ, ಚನ್ನಪ್ಪ ಚಿಂಚಲಿ, ಚನ್ನಪ್ಪ ಶಿರಹಟ್ಟಿ, ಅಮಿತ ಹಾಲೇವಾಡಿಮಠ, ಅನಿಲ ಬೆಲ್ಲದ, ಹನಮಂತಪ್ಪ ಚಿಂಚಲಿ, ವಿಜಯ ಕೋಪರ್ಡೆ, ಸರೋಜಮ್ಮ ಬನ್ನೂರ ಅವರನ್ನು ಸನ್ಮಾನಿಸಲಾಯಿತು. ಹೊಲಿಗೆ ಹಾಗೂ ಕಸೂತಿ ತರಬೇತಿ ಪಡೆದ 260 ಫಲಾನುಭವಿಗಳು ಇದ್ದರು. ಶಂಕರ ಬ್ಯಾಡಗಿ, ಅಭಿಷೇಕ ಉಮಚಗಿ, ಚೇತನ ಯಲಿಗಾರ, ಚಂದ್ರು ಕುಂದಗೋಳ, ನವೀನ ಬಡಿಗೇರ ನಿರ್ವಹಿಸಿದರು.



ಕರ್ನಾಟಕ ವಿಶ್ವವಿದ್ಯಾಲಯದ ನೂತನ ಪ್ರಭಾರಿ ಕುಲಪತಿಗಳಾಗಿ ಪ್ರೊ. ಜಯಶ್ರೀ ಎಸ್. ಮಂಗಳವಾರ ಅಧಿಕಾರ ಸ್ವೀಕರಿಸಿದರು. ಪ್ರಭಾರಿ ಕುಲಪತಿಯಾಗಿದ್ದ ಡಾ. ಬಿ.ಎಂ. ಪಾಟೀಲ ಅವರು ಸಮಾಜ ವಿಜ್ಞಾನ ನಿಖಾಯದ ಡೀನ್ ಆದ ಪ್ರೊ. ಜಯಶ್ರೀ ಎಸ್. ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಕುಲಸಚಿವ ಡಾ. ಎ.ಚನ್ನಪ್ಪ, ಮೌಲ್ಯಮಾಪನ ಕುಲಸಚಿವ ಡಾ. ನಿಜಲಿಂಗಪ್ಪ ಮಟ್ಟಿಹಾಳ, ವಿತ್ತಾಧಿಕಾರಿ ಡಾ. ಕೃಷ್ಣಮೂರ್ತಿ ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ಉಪಸ್ಥತರಿದ್ದರು.

# 'ವಿಜಯಪತಾಕೆ' ಟೀಸರ್ ಬಿಡುಗಡೆ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಷಣ್ಮುಖಪ್ಪ ಆರ್.ಎಲ್ ಅವರ ಶ್ರೀ ಬೊಮ್ಮಸಾಗರ ದುರ್ಗಾದೇವಿ ಪ್ರೊಡಕ್ಷನ್ ಸಂಸ್ಥೆಯ ಅಡಿಯಲ್ಲಿ ನಿರ್ಮಾಣವಾಗಿರುವ 'ವಿಜಯಪತಾಕೆ' ಚಲನಚಿತ್ರದ ಪ್ರಥಮ ಟೀಸರ್ ಬಿಡುಗಡೆ ಕುರಿತು ಪತಿಕಾಗೋಷ್ಠಿ ಗಜೇಂದ್ರಗಡದ ಪ್ರವಾಸಿ ಮಂದಿರದಲ್ಲಿ ಜರುಗಿತು.

ಗಜೇಂದ್ರಗಡದವನೇ ಆದ ನಾನು ಈ ಚಿತ್ರದಲ್ಲಿ ನಾಯಕನಾಗಿ ನಟಿಸಿ, ನಿರ್ದೇಶನ ಮಾಡಿದ್ದೇನೆ. 'ವಿಜಯಪಾತಕೆ' ಚಿತ್ರವನ್ನು ಉತ್ತರ ಕರ್ನಾಟಕದವರೇ ನಿರ್ಮಿಸಿದ್ದು, ಉತ್ತರ ಕರ್ನಾಟಕದ ಕಲಾವಿದರೇ ಹೆಚ್ಚು ಅಭಿನಯಿಸಿದ್ದಾರೆ. ಚಿತ್ರ ಅತ್ಯುತ್ತಮವಾಗಿ ಮೂಡಿಬಂದಿದೆ. ಇದೀಗ ಉತ್ತರ ಕರ್ನಾಟಕದ ಹೆಸರಾಂತ ಜಾನಪದ ಕಲಾವಿದರಾದ ಮಾಳು ನಿಪನಾಳ ಅವರ ಯೂಟ್ಯೂಬ್‌ನಲ್ಲಿ ಪ್ರಥಮ ಟೀಸರ್ ಬಿಡುಗಡೆ ಮಾಡಲಾಗುತ್ತಿದೆ ಎಂದು ಯುವ ನಿರ್ದೇಶಕ ಆರ್.ಶೈನ್ ಹೇಳಿದರು.

ಚಿತ್ರದಲ್ಲಿ ನಾಯಕಿಯಾಗಿ ವಾಣಿ ಬಿಜಾಪೂರ, ಮುಖ್ಯ ಖಳನಾಯಕರಾಗಿ ಶೋಭರಾಜ್ ಅಭಿನಯಿಸಿದ್ದಾರೆ. ಇನ್ನುಳಿದಂತೆ ಹರೀಶ್



ಪತ್ತಾರ, ಆನಂದ.ಕೆ, ಸಂಗನಗೌಡ ಕುರುಡಗಿ, ರಾಜಕುಮಾರ ಪಾಟೀಲ್, ಪಾಲಾಕ್ಷ, ಹುಸೇನ್ ಪತ್ತೇಖಾನ್, ನೇತ್ರಾ, ಅನ್ನಪೂರ್ಣ, ಪ್ರಕೃತಿ, ರಮಜಾನಸಾಬ್ ಉಳ್ಳಾಗಡ್ಡಿ, ಮುಂತಾದವರು ಅಭಿನಯಿಸಿದ್ದಾರೆ. ಕಥೆ, ಚಿತ್ರಕಥೆ, ಸಂಭಾಷಣೆ, ಹಾಗೂ ನಿರ್ದೇಶನ ಆರ್.ಶೈನ್, ಸಂಗೀತ ರಾಘವ್ ಸುಭಾಸ್, ಸಾಹಿತ್ಯ ಸುಭಾಸ್ ಬೆಟಗೇರಿ, ಹಿನ್ನೆಲೆ ಗಾಯನ ಅಭೀಷೇಕ ಎಮ್.ಆರ್, ಮೇಘನಾ ಹಳಿಯಾಳ ಹಾಗೂ ಸಾತ್ವಿಕ, ಛಾಯಾಗ್ರಹಣ ಗಿರೀಶ್ ಶಿರಗೇನಹಳ್ಳಿ, ಭರತ್, ಶ್ಯಾಮ್, ಸಂಕಲನ ರವಿ ರಾಠೋಡ, ಸಾಹಸ ಸಂತೋಷ ರಾಠೋಡ, ನೃತ್ಯ ಕಂಬಿ ರಾಜು, ವರ್ಣಾಲಂಕಾರ ಶ್ರೀಕಾಂತ್ ಕುಲಕರ್ಣಿ, ವಸ್ತ್ರಾಲಂಕಾರ ಸಾವಿತ್ರಿ ರಂಗ್ರೇಜಿ, ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ, ಕ್ರಿಯೇಟಿವ್ ಹೆಡ್ ಸಿ.ಜಿ. ವೆಂಕಟೇಶರಾವ್ ಅವರಿದ್ದಾರೆ ಎಂದು ತಿಳಿಸಿದರು.

ಧಾರವಾಡ ಜಿಲ್ಲೆಯ ನಿಗದಿ, ಬೆಣಕನಕಟ್ಟೆ, ಮುರಕಟ್ಟಿ ಮತ್ತು ಹಳಿಯಾಳ, ದಾಂಡೇಲಿ, ಗದಗ ಜಿಲ್ಲೆಯ ಗಜೇಂದ್ರಗಡ, ಭೈರಾಪೂರ ಸುತ್ತಮುತ್ತ, ಕೊಪ್ಪಳ ಜಿಲ್ಲೆಯ ಹನುಮಸಾಗರ, ಚಂದಾಲಿಂಗೇಶ್ವರ ದೇವಸ್ಥಾನ, ಮತ್ತು ಇಲಕಲ್ ತಾಲೂಕಿನ ಸುಕ್ಷೇತ್ರ ಸಿದ್ಧನಕೊಳ್ಳ, ಕರಾವಳಿ ಭಾಗಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಟೀಸರ್‌ನ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ನಾಯಕಿ ವಾಣಿ ವಿಜಯಪುರ, ಪಿಆರ್‌ಓ ಡಾ.ಪ್ರಭು ಗಂಜಿಹಾಳ, ಸಂಗನಗೌಡ ಕುರುಡಗಿ, ಹರೀಶ ಪತ್ತಾರ, ಜಯದೇವ ಗಂಜಿಹಾಳ ಸೇರಿದಂತೆ ಚಿತ್ರತಂಡದ ಕಲಾವಿದರು ಪಾಲ್ಗೊಂಡಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka